ಬುಧವಾರ,18.02.2026
ಬೆಂಗಳೂರು, ಬೆಲೆ: 5ರೂ,2 ಪುಟಗಳು
ಸಂಪುಟ 01 – ಸಂಚಿಕೆ 146

Digital Varthe Kannada Daily
Volume 01 - Issue 146
Wednesday, 18.02.2026
Price: 5/- Rs
2 Pages Bangalore

PRGI/RNI: KNKAN/25/A1348

ಡಿಜಿಟಲ್ ವಾರ್ತೆ
ಕನ್ನಡಿಗರ ಶಕ್ತಿ
ಕನ್ನಡ ದಿನಪತ್ರಿಕೆ

DIGITAL VARTHE
digitalvarthe@gmail.com
www.digitalvarthe.com

# JEE MAINSನಲ್ಲಿ ಹೊಯ್ಸಳ ಪಿಯು ಕಾಲೇಜು ವಿದ್ಯಾರ್ಥಿಗಳ ಸಾಧನೆ


ದರ್ಶನ್ ಮಂಜುನಾಥ್ ಗೌಡ
99.03


ಪ್ರಜ್ವಲ್ ಗೌಡ ಎನ್
91..00


ರಚನಾ ಪಿ
81.39


ಪವನ್ ಗೌಡ ಎಂ ಎಲ್
80.21


ಸಾಗರ್ ಆರ್
78.80


ಜಯಂತ್ ಸೂರ್ಯ
78.73


ಯಶಸ್ವಿನಿ ಜೆ
78.45



**ನೆಲಮಂಗಲ:** ಶಿವನಗರದಲ್ಲಿರುವ ಹೊಯ್ಸಳ ಪಿಯು ಕಾಲೇಜಿನ ವಿದ್ಯಾರ್ಥಿಗಳು ಜೆಇಇ ಮೇನ್ಸ್ ಪರೀಕ್ಷೆಯಲ್ಲಿ ಗಮನಾರ್ಹ ಸಾಧನೆ ಮಾಡಿದ್ದು, ಕಾಲೇಜಿನ ಪ್ರತಿಷ್ಠೆಯನ್ನು ಮತ್ತಷ್ಟು ಎತ್ತರಕ್ಕೇ–ರಿಸಿದ್ದಾರೆ. ವಿವಿಧ ವಿಭಾಗಗಳಲ್ಲಿ ಉತ್ತಮ ಪರ್ಸೆಂಟೈಲ್ ಗಳಿಸಿದ ವಿದ್ಯಾರ್ಥಿಗಳ ಸಾಧನೆಗೆ ಪೋಷಕರು, ಶಿಕ್ಷಕರು ಹಾಗೂ ಆಡಳಿತ ಮಂಡಳಿ ಹರ್ಷ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಗೌರಿಶಂಕರ್ ಅವರು, ನಮ್ಮ ವಿದ್ಯಾರ್ಥಿಗಳು ಶಿಸ್ತುಬದ್ಧವಾದ ತರಬೇತಿ, ನಿಯಮಿತ ಪರೀಕ್ಷಾ ಅಭ್ಯಾಸ ಮತ್ತು ಶಿಕ್ಷಕರ ಮಾರ್ಗದರ್ಶನದಿಂದ ಉತ್ತಮ ಫಲಿತಾಂಶ ಗಳಿಸಿದ್ದಾರೆ. ಈ ಸಾಧನೆ ಕಾಲೇಜಿನ ಸಮಗ್ರ ತಂಡದ ಪರಿಶ್ರಮದ ಫಲವಾಗಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ಉತ್ತಮ ಫಲಿತಾಂಶ ತರುವ ನಿಟ್ಟಿನಲ್ಲಿ ನಾವು ಬದ್ಧರಾಗಿದ್ದೇವೆ. ನಮ್ಮ ಕಾಲೇಜಿನಲ್ಲಿನ ಉಪನ್ಯಾಸಕರ ಶ್ರಮ ಇದರ ಹಿಂದೆ ಸಾಕಷ್ಟು ಶ್ರಮ ಇದೆ ಎಂದು ತಿಳಿಸಿದ್ದಾರೆ.

ಈ ಸಾಧನೆಯ ಹಿನ್ನೆಲೆ ವಿದ್ಯಾರ್ಥಿಗಳಾದ ದರ್ಶನ್ ಮಂಜುನಾಥ್ ಗೌಡ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಶಿಕ್ಷಕರ ಮಾರ್ಗದರ್ಶನ, ಮಾಕ್ ಟೆಸ್ಟ್‌ಗಳು ಮತ್ತು ನಿರಂತರ ಅಭ್ಯಾಸದಿಂದಲೇ ಉತ್ತಮ ಫಲಿತಾಂಶ ಸಾಧ್ಯವಾಯಿತು. ಪೋಷಕರ ಪ್ರೋತ್ಸಾಹವೂ ನಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿತು ಎಂದು ಅವರು ಹೇಳಿದರು.

ವಿದ್ಯಾರ್ಥಿನಿ ಪ್ರಜ್ವಲ್ ಗೌಡ ಮಾತನಾಡಿ, ಶಿಕ್ಷಕರ ಮಾರ್ಗದರ್ಶನ ಮತ್ತು ಪೋಷಕರ ಬೆಂಬಲದಿಂದಲೇ ಈ ಫಲಿತಾಂಶ ಸಾಧ್ಯವಾಯಿತು. ನಿಯಮಿತ ಅಭ್ಯಾಸ ಮತ್ತು ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಎದುರಿಸಿದೆ ಎಂದು ಹಂಚಿಕೊಂಡರು. ಕಾಲೇಜಿನಲ್ಲಿ ನೀಡಿದ ವಿಶೇಷ ತರಗತಿಗಳು ನಮಗೆ ತುಂಬಾ ಸಹಾಯವಾಯಿತು ಎಂದು ಹೇಳಿದರು.

ವಿದ್ಯಾರ್ಥಿಗಳ ಈ ಸಾಧನೆಯನ್ನು ಕೊಂಡಾಡಿ ಕಾಲೇಜು ವತಿಯಿಂದ ಸಂಭ್ರಮಾಚರಣೆ ನಡೆಸಲಾಯಿತು. ಶಿಕ್ಷಕರು ಮತ್ತು ಪೋಷಕರು ವಿದ್ಯಾರ್ಥಿಗಳನ್ನು ಅಭಿನಂದಿಸಿ ಸಿಹಿ ಹಂಚಿ ಶುಭಾಶಯ ತಿಳಿಸಿದರು. ಕಾಲೇಜು ಆವರಣದಲ್ಲಿ ಹರ್ಷದ ವಾತಾವರಣ ನಿರ್ಮಾಣವಾಗಿತ್ತು.

ಈ ಸಂದರ್ಭದಲ್ಲಿ ಶ್ರೀ ಶಿರಡಿ ಸಾಯಿ ಶಿಕ್ಷಣ ಟ್ರಸ್ಟ್ ಅಧ್ಯಕ್ಷರಾದ ಡಾ. ರಾಮಕೃಷ್ಣಪ್ಪ ಟಿ, ಹೊಯ್ಸಳ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಗೋಪಾಲ್ ಹೆಚ್.ಆರ್, ಹೊಯ್ಸಳ ಪದವಿ ಪೂರ್ವ ಕಾಲೇಜು ಉಪ ಪ್ರಾಂಶುಪಾಲರಾದ ಚಿದಾನಂದ ಗೌಡ ಇ, ಇಂಗ್ಲಿಷ್ ವಿಭಾಗದ ಮುಖ್ಯಸ್ಥರು ಶ್ರೀಮತಿ ಪೂರ್ಣಿಮಾ ಜಿ, ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರು ಮಹದೇವಪ್ಪ ಗೌಡ, ಜೀವಶಾಸ್ತ್ರ ವಿಭಾಗದ ಮುಖ್ಯಸ್ಥರು ಶ್ರೀಮತಿ ಗೀತಾ,ಭೌತಶಾಸ್ತ್ರ ವಿಭಾಗದ ಮುಖ್ಯಸ್ಥರು ಹ–ರೀಶ್, ಶ್ರೀಧರ್ ಬಿ.ಜೆ, ಐಶ್ವರ್ಯ, ಸುಜಾತ, ಕರುಣಾಕರ ನಾಯ್ಡು ಹಾಗೂ ಇತರ ಉಪನ್ಯಾಸಕರು ಕಾರ್ಯಕ್ರಮದಲ್ಲಿ ಭಾಗವಹಿಸಿ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

| | |
|---|---|
| ಪ್ರತಿಷ್ಠಾ | 77.68 |
| ಪೂಜಿತಾ ಎಂ ಡಿ | 77.14 |
| ನವ್ಯಾ ಕೆ | 77.00 |
| ವಿಷ್ಣು ಪ್ರಿಯಾ ಡಿ | 76.67 |
| ತೇಜಸ್ವಿನಿ ಎನ್ ಎಸ್ | 76.90 |
| ಬಿಂದು ಎ | 76.08 |
| ಯಶಸ್ ಎಚ್ ಕೆ | 75.96 |
| ಡಿ. ಪಿ. ಸಿಂಚನಾ | 73.90 |
| ಪವನ್ ಕುಮಾರ್ ಎಚ್. ಎಂ | 73.22 |
| ಪರಿಚಯ ಪಾಟೀಲ್ ಎ. ಇ | 72.98 |
| ಧನುಷ್ ಗೌಡ ಟಿ. ಆರ್ | 72.90 |
| ಸಂಜನ್ ಗೌಡ ಟಿ. ಆರ್ | 72.32 |
| ಯಶವಂತ್ ಎನ್ ಎಸ್ | 72.47 |
| ದುಶ್ಯಂತ್ ಕೆ. ಪಿ | 71.80 |
| ಹೇಮಂತ್ ಡಿ. ಎನ್ | 71.67 |
| ಗೌತಮ್ ಎಂ | 70.00 |
| ಯೋಗೇಶ್ ನಾಯಕರ ಎನ್ | 65.40 |
| ಋಷಿಕೇಶ್ ಕಿಟ್ಟೂರು | 62.10 |
| ಗಗನಾ ಸಿ | 52.00 |

## ಅನ್ಯಕೋಮಿನ ಯುವಕರಿಂದ ಹಿಂದೂಗಳ ಮನೆ ಮೇಲೆ ಕಲ್ಲು ತೂರಾಟ!?

**ಚಿಕ್ಕಮಗಳೂರು:** ನಗರದಲ್ಲಿ ಸಮುದಾ ಯಗಳ ನಡುವೆ ಉದ್ವಿಗ್ನತೆ ಸೃಷ್ಟಿಸುವಂತಹ ಘಟನೆ ಬೆಳಕಿಗೆ ಬಂದಿದೆ. ನಗರದ ವಿಜಯಪುರ ಬಡಾವಣೆಯಲ್ಲಿ ಕೆಲವು ಅನ್ಯಕೋಮಿನ ಯುವಕರು ಹಿಂದೂ ಸಮುದಾಯದ ಮನೆಗಳ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ ಎಂಬ ಆರೋಪ ಕೇಳಿಬಂದಿದ್ದು, ಈ ಘಟನೆ ಎರಡು ಕೋಮಿನ ನಡುವೆ ಗಲಾಟೆಗೆ ಕಾರಣವಾಗಿದೆ.

ಸ್ಥಳೀಯರ ಹೇಳಿಕೆಯಂತೆ, ಕಳೆದ ಸುಮಾರು ಒಂದು ವಾರದಿಂದ 5–6 ಯುವಕರ ಗುಂಪೊಂದು ರಾತ್ರಿ ವೇಳೆ ಮನೆಗಳ ಹಿಂಭಾಗಕ್ಕೆ ಬಂದು ಕಲ್ಲು ಎಸೆದು ಪರಾರಿಯಾಗುತ್ತಿತ್ತು ಎನ್ನಲಾಗಿದೆ. ಇದರಿಂದಾಗಿ ನಿವಾಸಿಗಳಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಕಳೆದ ಮೂರು ದಿನಗಳಿಂದ ಕೆಲ ಯುವಕರು ಪ್ರದೇಶದ ಹೆಣ್ಣುಮಕ್ಕಳ ಹಿಂದೆ ಹೋಗುತ್ತಿದ್ದರು ಎಂಬ ಗಂಭೀರ ಆರೋಪವೂ ವ್ಯಕ್ತವಾಗಿದೆ. ಈ ಎಲ್ಲ ಬೆಳವಣಿಗೆಗಳಿಂದಾಗಿ ಸ್ಥಳೀಯರಲ್ಲಿ ಆಕ್ರೋಶ ಹೆಚ್ಚಾಗಿದ್ದು, ಮಧ್ಯರಾತ್ರಿ ವೇಳೆಗೆ



ನಗರದಲ್ಲಿ ಬೂದಿ ಮುಚ್ಚಿದ ಕೆಂಡದಂತ ಪರಿಸ್ಥಿತಿ ನಿರ್ಮಾಣವಾಗಿತ್ತು ಎಂದು ಹೇಳಲಾಗಿದೆ.

ಈ ನಡುವೆ, ಕಲ್ಲು ತೂರಾಟದಲ್ಲಿ ಭಾಗಿಯಾಗಿದ್ದಾರೆ ಎಂಬ ಅನುಮಾನದಲ್ಲಿ ಇಬ್ಬರು ಯುವಕರು ಸಿಕ್ಕಿಬಿದ್ದಿದ್ದು, ಅವರನ್ನು ಕೆಲವು ಹಿಂದೂ ಸಂಘಟನೆ ಕಾರ್ಯಕರ್ತರು ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಘಟನೆಯ ನಂತರ ಬಸವನಹಳ್ಳಿ ಪೊಲೀಸ್ ಠಾಣೆ ಎದುರು ಎರಡೂ ಕೋಮಿನ ನೂರಾರು ಯುವಕರು ಜಮಾಯಿಸಿದ್ದು, ಉದ್ವಿಗ್ನ ಪರಿಸ್ಥಿತಿ ಉಂಟಾಯಿತು.

ಈ ವೇಳೆ, "ಕಲ್ಲು ತೂರಾಟದಲ್ಲಿ ತೊಡಗಿದ್ದವರು ಇವರಲ್ಲ, ಹಲ್ಲೆ ನಡೆಸಿದವರ ಮೇಲೂ ಕಾನೂನು ಕ್ರಮ ಕೈಗೊಳ್ಳಬೇಕು" ಎಂದು ಒಂದು ಕೋಮಿನ ಯುವಕರು ವಾದಿಸಿದ್ದಾರೆ. ಹೀಗಾಗಿ ಪರಿಸ್ಥಿತಿ ಮತ್ತಷ್ಟು ತೀವ್ರಗೊಳ್ಳುವ ಸಾಧ್ಯತೆ ಕಂಡುಬಂದಿತು.

ಪರಿಸ್ಥಿತಿ ಹದಗೆಡದಂತೆ ಎಚ್ಚೆತ್ತ ಪೊಲೀಸರು ತಕ್ಷಣವೇ ಕ್ರಮ ಕೈಗೊಂಡು ಪೊಲೀಸ್ ಠಾಣೆ ಹಾಗೂ ಆಸ್ಪತ್ರೆ ಸುತ್ತಮುತ್ತ ಗುಂಪು ಸೇರದಂತೆ ಎರಡೂ ಕೋಮಿನ ಯುವಕರನ್ನು ಚದುರಿಸಿದ್ದಾರೆ. ಹೆಚ್ಚುವರಿ ಭದ್ರತೆ ನಿಯೋಜಿಸಿ ಶಾಂತಿ ಕಾಪಾಡಲು ಕ್ರಮ ಕೈಗೊಂಡಿದ್ದಾರೆ. ಹಲ್ಲೆಗೊಳಗಾದ ಇಬ್ಬರು ಯುವಕರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ತಿಳಿದುಬಂದಿದೆ.

ಇದೇ ವೇಳೆ, ಕಲ್ಲು ತೂರಾಟದ ಸಂಬಂಧ ಮನೆಯ ಮಾಲೀಕರು ಕೆಲವು ಅಪ್ರಾಪ್ತ ಬಾಲಕರ ವಿರುದ್ಧ ದೂರು ದಾಖಲಿಸಿದ್ದಾರೆ. ಮತ್ತೊಂದೆಡೆ, ಅಪ್ರಾಪ್ತ ಬಾಲಕರು ಹಾಗೂ ಅವರ ಕುಟುಂಬಸ್ಥರು ಹಿಂದೂ ಸಂಘಟನೆ ಕಾರ್ಯಕರ್ತರು ಮತ್ತು ಬಿಜೆಪಿ ಮುಖಂಡರ ವಿರುದ್ಧ ಬಸವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರತಿದೂರು ದಾಖಲಿಸಿ ರುವುದಾಗಿ ತಿಳಿದುಬಂದಿದೆ.

ಘಟನೆಯ ಹಿನ್ನೆಲೆ ಹಾಗೂ ನಿಖರ ಕಾರಣ ತಿಳಿಯಲು ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ಮುಂದುವರಿಸಿದ್ದಾರೆ. ಪ್ರದೇಶದಲ್ಲಿ ಶಾಂತಿ ಕಾಪಾಡಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಣ್ಣಿಟ್ಟಿದ್ದಾರೆ.

## ಅಪಘಾತದಲ್ಲಿ ಪುತ್ರ ಸಾವು–ಮನನೊಂದು ದಂಪತಿ ಆತ್ಮಹತ್ಯೆ



**ರಾಯ್ಚೂರ:** ಜಿಲ್ಲೆಯಲ್ಲಿ ಹೃದಯ ವಿದ್ರಾವಕ ಘಟನೆ ಬೆಳಕಿಗೆ ಬಂದಿದೆ. ರಸ್ತೆ ಅಪಘಾತದಲ್ಲಿ ಏಕೈಕ ಪುತ್ರನನ್ನು ಕಳೆದುಕೊಂಡ ದುಃಖವನ್ನು ಸಹಿಸಲಾಗದೆ ದಂಪತಿ ಇಬ್ಬರೂ ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ದಾರುಣ ಘಟನೆ ನಡೆದಿದೆ.

ಮೃತರನ್ನು ಕೃಷ್ಣ ಪಟೇಲ್ (48) ಹಾಗೂ ಅವರ ಪತ್ನಿ ರಮಾ ಬಾಯಿ (47) ಎಂದು ಗುರುತಿಸಲಾಗಿದೆ. ವೃತ್ತಿಯಲ್ಲಿ ಮೇಸ್ತ್ರಿಯಾಗಿದ್ದ ಕೃಷ್ಣ ಮತ್ತು ಗೃಹಿಣಿಯಾಗಿದ್ದ ರಮಾ ಬಾಯಿ ತಮ್ಮ ಮನೆಯ ಅಂಗಳದಲ್ಲಿದ್ದ ಬೇವಿನ ಮರಕ್ಕೆ ನೇಣುಬಿಗಿದುಕೊಂಡು ಜೀವತ್ಯಾಗ ಮಾಡಿದ್ದಾರೆ. ಘಟನೆ ತಿಳಿದ ತಕ್ಷಣ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ದಂಪತಿ ಆತ್ಮಹತ್ಯೆಗೆ ಮುನ್ನ ನಾಲ್ಕು ಪುಟಗಳ ಡೆತ್‌ನೋಟ್ ಬರೆದಿರುವುದಾಗಿ ಹಾಗೂ ಒಂದು ವೀಡಿಯೊ ಸಂದೇಶವನ್ನು ರೆಕಾರ್ಡ್ ಮಾಡಿರುವುದಾಗಿ ತಿಳಿದುಬಂದಿದೆ. ಅದರಲ್ಲಿ ತಮ್ಮ ಏಕೈಕ ಪುತ್ರನ ಸಾವಿನ ನೋವನ್ನು ತಾಳಲಾಗದೇ ಈ ನಿರ್ಧಾರ ಕೈಗೊಂಡಿರುವುದಾಗಿ ಉಲ್ಲೇಖಿಸಿರುವ ಮಾಹಿತಿ ಲಭ್ಯವಾಗಿದೆ.

ದಂಪತಿಯ ಏಕೈಕ ಪುತ್ರ 21 ವರ್ಷದ ಆದಿತ್ಯ ಪಟೇಲ್ 2024ರಲ್ಲಿ ಮಸ್ಕೂರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದ. ಆದಿತ್ಯ ಕುಟುಂಬದ ಕಣ್ಣಿನ ಮಣಿಯಾಗಿದ್ದನು. ತಂದೆ–ತಾಯಿಗೆ ಅವನೇ ಪ್ರಪಂಚವಾಗಿದ್ದು, ಅವನ ಅಕಾಲಿಕ ಮರಣದಿಂದ ದಂಪತಿ ಮನೋವ್ಯಥೆಗೆ ಒಳಗಾಗಿದ್ದರು.

ಘಟನೆಯ ದಿನ ಆದಿತ್ಯ ದೇವಸ್ಥಾನದ ಕೆಲಸ ಹಾಗೂ ಯಜ್ಞ ಕಾರ್ಯಕ್ರಮಕ್ಕೆ ಸಹಾಯ ಮಾಡಲು ಗ್ರಾಮದ ಪುರೋಹಿತರೊಂದಿಗೆ ಹೊರಟಿದ್ದನು. ಮೊದಲಿಗೆ ಹೋಗಲು ಆತ ಹಿಂಜರಿದಿದ್ದಾನೆ ಎಂದು ತಿಳಿದುಬಂದಿದೆ. ಆದರೆ "ಇದು ದೇವರ ಕೆಲಸ, ಹೋಗಿ ಬಾ" ಎಂದು ತಂದೆ ಕೃಷ್ಣ ಒತ್ತಾಯಿಸಿದ್ದಾಗಿ ಡೆತ್‌ನೋಟ್‌ನಲ್ಲಿ ಉಲ್ಲೇಖಿಸಲಾಗಿದೆ. ಈ ಮಾತು ನೆನಪಾಗಿ ತನ್ನಿಂದ ತಪ್ಪಾಗಿದೆ ಎಂದು ಕೃಷ್ಣ ಕಣ್ಣೀರಿಟ್ಟಿರುವುದು ಆ ಪತ್ರದಲ್ಲಿ ಕಾಣಿಸಿಕೊಂಡಿದೆ ಎನ್ನಲಾಗಿದೆ.

ಮಗನ ಸಾವಿನ ನಂತರ ದಂಪತಿ ಗಾಢ ಮನನೊಂದ ಸ್ಥಿತಿಯಲ್ಲಿ ಜೀವನ ಸಾಗಿಸುತ್ತಿದ್ದರು. ಸುತ್ತಮುತ್ತಲಿನವರು ಸಮಾಧಾನಪಡಿಸಲು ಯತ್ನಿಸಿದ್ದರೂ, ಪುತ್ರನ ನೆನಪು ಅವರನ್ನು ಕಾಡುತ್ತಲೇ ಇತ್ತು. ಕೊನೆಗೆ ತಾಳ್ಮೆ ಕಳೆದುಕೊಂಡ ದಂಪತಿ ಇಂತಹ ದುಃಖದ ನಿರ್ಧಾರಕ್ಕೆ ಶರಣಾದರು ಎಂದು ಸ್ಥಳೀಯರು ಹೇಳುತ್ತಾರೆ.

ಘಟನೆಯ ಕುರಿತು ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ. ಈ ದಾರುಣ ಘಟನೆ ಗ್ರಾಮಸ್ಥರನ್ನೇ ಬೆಚ್ಚಿಬೀಳಿಸಿದ್ದು, ಕುಟುಂಬದ ಮೇಲೆ ದುಃಖದ ನೆರಳು ಆವರಿಸಿದೆ.

## ವಾರದೊಳಗೆ ಕಾಮಗಾರಿಗಳು ಕಾನೂನು ಬದ್ಧ, ವ್ಯವಸ್ಥಿತವಾದ ಚಾಲನೆ ಆಗಬೇಕು: ಶಾಸಕ ಎಸ್ ಮುನಿರಾಜು ಗರಂ



**ಪೀಣ್ಯ ದಾಸರಹಳ್ಳಿ:** ಬೆಂಗಳೂರು ನಗರ ಉತ್ತರ ಪಾಲಿಕೆಯ ನಾಲ್ಕು ವಾರ್ಡ್ ಗಳಲ್ಲಿ ಕಾಮಗಾರಿಗಳು ನಿಧಾನಗತಿಯಲ್ಲಿ ಸಾಗಿವೆ ಒಂದು ವಾರದೊಳಗೆ ಕಾನೂನು ಬದ್ಧ ಮತ್ತು ವ್ಯವಸ್ಥಿತವಾಗಿ ಎಲ್ಲಾ ಕಾಮಗಾರಿಗಳು ಚಾಲನೆ ಆಗಬೇಕು. ಕೆಲವು ಬೇಜವಾಬ್ದಾರಿಯಿಂದ ವರ್ತಿಸುತ್ತಿರುವ ಅಧಿಕಾರಿಗಳಿಗೆ ಶಿಸ್ತಿನ ಕ್ರಮ ಜರುಗಿಸಬೇಕು ಎಂದು ಎಲ್ಲಾ ವಿಭಾಗದ ಅಧಿಕಾ–ರಿಗಳ ಸಭೆ ಕರೆಯಲಾಗಿದೆ ಎಂದು ಶಾಸಕ ಎಸ್ ಮುನಿರಾಜು ತಿಳಿಸಿದರು.

ಬಾಗಲಗುಂಟೆಯ ಜಿಬಿಎ ಕಚೇರಿಯಲ್ಲಿ ಎಲ್ಲಾ ವಿಭಾಗದ ಅಧಿಕಾರಿಗಳು ಮತ್ತು ಬೆಂಗಳೂರು ನಗರ ಉತ್ತರ ಪಾಲಿಕೆ ಆಯುಕ್ತ ಪೋಮ್ಮಲ ಸುನಿಲ್ ಕುಮಾರ್ ಅವರೊಂದಿಗೆ ಸಭೆ ನಡೆಸಿ ಮಾತನಾಡಿದರು. ಎಂಜಿನಿಯರ್ ಶಾಖೆ ಕಂದಾಯ, ಬಿಡಬ್ಲ್ಯೂಎಸ್ಎಸ್‌ಬಿ, ಆರೋಗ್ಯ ಇಲಾಖೆ, ತೋಟಗಾರಿಕೆ, ಕಲ್ಯಾಣ ಇಲಾಖೆ ಮುಂತಾದ ಇಲಾಖೆಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಬೇಜವಾಬ್ದಾರಿ ಅಧಿಕಾರಿಗಳಿಗೆ ಚುರುಕು ಮುಟ್ಟಿಸಲಾಗಿದೆ ಎಂದರು.

ಆಯುಕ್ತರು ಕೂಡ ಅಧಿಕಾರಿಗಳಿಗೆ ಶಿಸ್ತು ಕ್ರಮ ಜರುಗಿಸಲಿದ್ದಾರೆ. ಇಲ್ಲಿ ಅನೇಕ ಸಮಸ್ಯೆಗಳಿವೆ ಹಾಗಾಗಿ ಅಭಿವೃದ್ಧಿ ಕಾರ್ಯಗಳಿಗೆ ಮುಂಬರುವ ಬಜೆಟ್ ನಲ್ಲಿ ದಾಸರಹಳ್ಳಿ ಕ್ಷೇತ್ರಕ್ಕೆ ಹೆಚ್ಚು ಅನುದಾನ ನೀಡುವಂತೆ ಆಯುಕ್ತರಿಗೆ ಮನವಿ ನೀಡಲಾಗಿದೆ ಎಂದರು. ಜಂಟಿ ಆಯುಕ್ತೆ ಪಲ್ಲವಿ ಮಾತನಾಡಿ, ಸಭೆಯಲ್ಲಿ ರಸ್ತೆಗುಂಡಿ, ನೀರು, ಚರಂಡಿ ವ್ಯವಸ್ಥೆ, ಕಾಮಗಾರಿ ವಿಳಂಬ, ಕಸ ವಿಲೇವಾರಿ, ಪಾರ್ಕ್, ಫುಟ್ ಪಾತ್, ಟ್ರಾಫಿಕ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು'ಎಂದು ವಿವ–ರಿಸಿದರು.

ಸಭೆಯಲ್ಲಿ ಬೆಂಗಳೂರು ಉತ್ತರ ಪಾಲಿಕೆ ಆಯುಕ್ತ ಪೋಮ್ಮಲ ಸುನಿಲ್ ಕುಮಾರ್, ಮುಖ್ಯ ಎಂಜಿನಿಯರ್ ಯಮುನಾ, ಉಪಆಯುಕ್ತೆ ಮಂಗಳ ಗೌರಿ, ಸೂಪರ್ಡೆಂಟ್ ಎಂಜಿನಿಯರ್ ಕೃಷ್ಣಕುಮಾರ್, ಬಿಡಬ್ಲ್ಯೂಎಸ್ಎಸ್‌ಬಿ ಎಕ್ಸಿಕ್ಯೂಟಿವ್ ಎಂಜಿನಿಯರ್ ಮಂಜುನಾಥ್, ಇನ್ಸೆಕ್ಟರ್ ಹನುಮಂತರಾಜು ಮುಂತಾದ ಇಲಾಖೆಯವರು ಇದ್ದರು.

## ನರಸೀಪುರ ತಾಲೂಕು ಪಂಚಾಯಿತಿ ಚುನಾವಣೆಗೆ ರಾಜು ಗೌಡ ಸ್ಪರ್ಧೆ!? ರಾಜಕೀಯ ವಲಯದಲ್ಲಿ ಚರ್ಚೆ

**ನೆಲಮಂಗಲ:** ಸೋಂಪುರ ಹೋಬಳಿ, ನರಸೀಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಡುವ ಹೆಗ್ಗುಂದ ಗ್ರಾಮದ ಯುವ ಮುಖಂಡ ರಾಜು ಗೌಡ ಅವರು ಮುಂಬರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ರಾಜಕೀಯ ಚಟುವಟಿ–ಕೆಗಳನ್ನು ಚುರುಕುಗೊಳಿಸಿರುವುದಾಗಿ ತಿಳಿದುಬಂದಿದೆ. ಸ್ಥಳೀಯ ರಾಜಕೀಯ ವಲಯದಲ್ಲಿ ಅವರ ಹೆಸರು ಚರ್ಚೆಗೆ ಗ್ರಾಸವಾಗಿದ್ದು, ಬಿಜೆಪಿ ಹಾಗೂ ಜೆಡಿಎಸ್ ಪಕ್ಷಗಳ ಟಿಕೆಟ್ ಆಕಾಂಕ್ಷಿಗಳ ಪ್ರಾಥಮಿಕ ಪಟ್ಟಿಯಲ್ಲಿ ರಾಜು ಗೌಡ ಅವರ ಹೆಸರು ಕೇಳಿಬರುತ್ತಿದೆ ಎಂದು ಅವರ ಅಭಿಮಾನಿಗಳು ಮತ್ತು ಸ್ನೇಹಿತರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ರಾಜು ಗೌಡ ಅವರು ಕಳೆದ ಹಲವು ವರ್ಷಗಳಿಂದ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡು ಜನಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಗ್ರಾಮ ಮಟ್ಟದಲ್ಲಿ ರಸ್ತೆ, ಕುಡಿಯುವ ನೀರು, ದೇವಾಲಯಗಳ ಪುನರ್‌ನಿರ್ಮಾಣ, ಕ್ರೀಡಾ ಚಟುವಟಿಕೆಗಳ ಪ್ರೋತ್ಸಾಹ, ವಿದ್ಯಾರ್ಥಿಗಳಿಗೆ ನೆರವು, ಆರೋಗ್ಯ ಶಿಬಿರಗಳ ಆಯೋಜನೆ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳಲ್ಲಿ ಅವರು ಪ್ರಮುಖ ಪಾತ್ರವಹಿಸಿದ್ದಾರೆ ಎಂಬುದು ಸ್ಥಳೀಯರ ಅಭಿಪ್ರಾಯವಾಗಿದೆ. ಯಾವುದೇ ರಾಜಕೀಯ ಹುದ್ದೆ ಇಲ್ಲದೆ ಸಹ ಸಾಮಾನ್ಯ ಜನರ ಸಮಸ್ಯೆಗಳಿಗೆ ಸ್ಪಂದಿಸಿ, ಅಧಿಕಾರಿಗಳ ಗಮನಕ್ಕೆ ತಂದು ಪರಿಹಾರ ಕಲ್ಪಿಸುವಲ್ಲಿ ಸಕ್ರಿಯರಾಗಿದ್ದಾರೆ ಎಂದು ಗ್ರಾಮಸ್ಥರು ಹೇಳುತ್ತಾರೆ.

ಸಂಕಷ್ಟದ ಸಮಯಗಳಲ್ಲಿ ಜನರ ಜೊತೆ ನಿಂತು ನೆರವು ನೀಡಿರುವುದು, ಬಡ ಕುಟುಂಬಗಳಿಗೆ ಆರ್ಥಿಕ ಸಹಾಯ ಮಾಡಿರುವುದು ಹಾಗೂ ಸಾಮಾಜಿಕ ಕಾರ್ಯಕ್ರಮಗಳಲ್ಲಿ ಮುಂಚೂಣಿಯಲ್ಲಿ ಭಾಗವಹಿಸಿರುವುದು ಅವರಿಗೆ ವಿಶಾಲ ಬೆಂಬಲವನ್ನು ತಂದಿದೆ ಎನ್ನಲಾಗಿದೆ. ಯುವಕರನ್ನು ಸಂಘಟಿಸಿ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಉತ್ತೇಜಿಸಿರುವುದು ಅವರ ಜನಪ್ರಿಯತೆಯನ್ನು ಹೆಚ್ಚಿಸಿದೆ.



ಇದೀಗ, ಕ್ಷೇತ್ರದ ಜನತೆ ಮತ್ತು ಅವರ ಅಭಿಮಾನಿಗಳು ರಾಜು ಗೌಡ ಅವರು ನೇರವಾಗಿ ರಾಜಕೀಯ ಕ್ಷೇತ್ರಕ್ಕೆ ಪ್ರವೇಶಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ. "ನರಸೀಪುರ ತಾಲೂಕು ಪಂಚಾಯಿತಿ ಕ್ಷೇತ್ರ ಸಾಮಾನ್ಯ ವರ್ಗಕ್ಕೆ ಮೀಸಲಾಗಿರುವ ಹಿನ್ನೆಲೆಯಲ್ಲಿ ರಾಜು ಗೌಡ ಅವರಂತಹ ಯುವ ಮತ್ತು ಸಮಾಜಮುಖಿ ವ್ಯಕ್ತಿತ್ವವು ಸ್ಪರ್ಧಿಸಿದರೆ ಅಭಿವೃದ್ಧಿಗೆ ಹೊಸ ದಿಕ್ಕು ಸಿಗಲಿದೆ" ಎಂಬ ಅಭಿಪ್ರಾಯವನ್ನು ಬೆಂಬಲಿಗರು ವ್ಯಕ್ತಪಡಿಸಿದ್ದಾರೆ.

ಬಿಜೆಪಿ ಪಕ್ಷದ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸುವುದು ಬಹುತೇಕ ಖಚಿತವಾಗಿದ್ದು, ಪಕ್ಷದ ಹಿರಿಯ ನಾಯಕರೊಂದಿಗೆ ಮಾತುಕತೆ ಕೂಡ ನಡೆದಿದೆ ಎಂದು ಅವರ ಆಪ್ತರು ತಿಳಿಸಿದ್ದಾರೆ. ಕೆಲ ವಲಯಗಳಲ್ಲಿ ಜೆಡಿಎಸ್ ಪಕ್ಷದಿಂದಲೂ ಸ್ಪರ್ಧಿಸುವ ಸಾಧ್ಯತೆ ಬಗ್ಗೆ ಚರ್ಚೆಗಳು ನಡೆಯುತ್ತಿರುವುದಾಗಿ ತಿಳಿದುಬಂದಿದೆ. ಆದರೆ ಅಂತಿಮ ನಿರ್ಧಾರವನ್ನು ಪಕ್ಷದ ವರಿಷ್ಠರು ಹಾಗೂ ಸ್ಥಳೀಯ ಬೆಂಬಲಿಗರ ಸಲಹೆ ಆಧರಿಸಿ ಕೈಗೊಳ್ಳಲಾಗುತ್ತದೆ ಎಂದು ಹೇಳಲಾಗಿದೆ.

ಒಟ್ಟಾರೆ, ಹೆಗ್ಗುಂದ ಗ್ರಾಮ ಸೇ–ರಿದಂತೆ ನರಸೀಪುರ ಭಾಗದಲ್ಲಿ ರಾಜು ಗೌಡ ಅವರ ಹೆಸರು ಪ್ರಮುಖ ಆಕಾಂಕ್ಷಿಯಾಗಿ ಕೇಳಿಬರುತ್ತಿದ್ದು, ಮುಂಬರುವ ಚುನಾವಣೆಯಲ್ಲಿ ಅವರು ಯಾವ ಪಕ್ಷದಿಂದ ಸ್ಪರ್ಧಿಸಲಿದ್ದಾರೆ ಎಂಬ ಕುತೂಹಲ ಕ್ಷೇತ್ರದ ರಾಜಕೀಯ ವಲಯದಲ್ಲಿ ಜೋರಾಗಿದೆ. ಅಧಿಕೃತ ಘೋಷಣೆ ಹೊರಬಿದ್ದ ಬಳಿಕ ಚಿತ್ರಣ ಸ್ಪಷ್ಟವಾಗಲಿದೆ.

## ಲಾಡ್ಜ್‌ನಲ್ಲಿ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ ಜೋಡಿ

**ಬಾಗಲಕೋಟೆ:** ಜಿಲ್ಲೆಯಲ್ಲಿ ಆತಂಕಕಾರಿ ಘಟನೆ ಬೆಳಕಿಗೆ ಬಂದಿದೆ. ಜಿಲ್ಲೆಯ ತೇರದಾಳ ಪಟ್ಟಣದಲ್ಲಿರುವ ಪ್ರಖ್ಯಾತ 'ರಾಯಲ್ ಲಾಡ್ಜ್'ನಲ್ಲಿ ಜೋಡಿಯೊಂದು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿರುವ ಘಟನೆ ಸ್ಥಳೀಯರನ್ನು ಬೆಚ್ಚಿಬೀಳಿಸಿದೆ.

ಘಟನೆಯಲ್ಲಿ ಗುರು ಪಾದಯ್ಯ ಹಿರೇಮಠ (45) ಹಾಗೂ ಅಕ್ಷತಾ ಶ್ರೀಶೈಲ ಸತ್ತಿ (25) ಗಂಭೀರವಾಗಿ ಗಾಯಗೊಂಡವರು ಎಂದು ಗುರುತಿಸಲಾಗಿದೆ. ಗುರುಪಾದಯ್ಯ ಅವರು ಮೂಲತಃ ಬಾಗಲಕೋಟೆ ಜಿಲ್ಲೆಯ ಜಮಖಂಡಿ ನಿವಾಸಿಯಾಗಿದ್ದು, ತೇರದಾಳದ ರಾಯಲ್ ಲಾಡ್ಜ್‌ನಲ್ಲಿ ಸಪ್ಲೈಯರ್ ಆಗಿ ಕೆಲಸ ಮಾಡುತ್ತಿದ್ದರು. ಅಕ್ಷತಾ ಅವರು ಬೆಳಗಾವಿ ಜಿಲ್ಲೆಯ ಮೂಲದವರಾಗಿದ್ದು, ಕಳೆದ ಎರಡು ದಿನಗಳಿಂದ ಗುರುಪಾದಯ್ಯ ತಂಗಿದ್ದ ಕೊಠಡಿಯಲ್ಲೇ ಉಳಿದುಕೊಂಡಿದ್ದರು ಎಂಬ ಮಾಹಿತಿ ಲಭ್ಯವಾಗಿದೆ.

ಮಂಗಳವಾರ ಬೆಳಗಿನ ಜಾವ ಅವರು ತಂಗಿದ್ದ ಕೊಠಡಿಯಿಂದ ಅಚಾನಕ್ ಹೊಗೆ ಹೊರಬರುತ್ತಿರುವುದನ್ನು ಲಾಡ್ಜ್ ಸಿಬ್ಬಂದಿ ಗಮನಿಸಿದ್ದಾರೆ. ತಕ್ಷಣವೇ ಕೊಠಡಿಗೆ ಧಾವಿಸಿ ಬಾಗಿಲು ತೆರೆಯುತ್ತಿದ್ದಂತೆ, ಇಬ್ಬರೂ ಬೆಂಕಿಗೆ ಆಹುತಿಯಾಗಿ ಗಂಭೀರವಾಗಿ ಸುಟ್ಟ ಗಾಯಗಳೊಂದಿಗೆ ನೆಲಕ್ಕುರುಳಿದ್ದ ಸ್ಥಿತಿಯಲ್ಲಿ ಕಂಡುಬಂದಿದ್ದಾರೆ. ಸಿಬ್ಬಂದಿ ತಕ್ಷಣವೇ ಬೆಂಕಿ ಆರಿಸಿ, ಸ್ಥಳೀಯರ ಸಹಾಯದಿಂದ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ದಿದ್ದಾರೆ.

ಮೊದಲು ತೇರದಾಳದ ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾದ ಇವರ ಸ್ಥಿತಿ ಗಂಭೀರವಾಗಿದ್ದ ಕಾರಣ, ಹೆಚ್ಚಿನ ಚಿಕಿತ್ಸೆಗಾಗಿ ವಿಜಯಪುರದ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ. ವೈದ್ಯಕೀಯ ಮೂಲಗಳ ಪ್ರಕಾರ ಇಬ್ಬ–ರಿಗೂ ದೇಹದ ಬಹುಭಾಗ ಸುಟ್ಟಿದ್ದು, ಅವರ ಆರೋಗ್ಯ ಸ್ಥಿತಿ ಚಿಂತಾಜನಕವಾಗಿದೆ.

ವಿಷಯ ತಿಳಿದ ತಕ್ಷಣ ತೇರದಾಳ ಪೊಲೀಸ್ ಠಾಣೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕೊಠಡಿಯಲ್ಲಿ ಬೆಂಕಿ ಹಚ್ಚಿಕೊಳ್ಳಲು ಯಾವ ವಸ್ತುವನ್ನು ಬಳಸಿದರು? ಘಟನೆ ಆತ್ಮಹತ್ಯೆ ಯತ್ನವೇ ಅಥ–'ವಾ ಇನ್ನೇನಾದರೂ ಕಾರಣವಿದೆಯೇ? ಎಂಬ ಹಲವು ಆಯಾಮಗಳಲ್ಲಿ ತನಿಖೆ ಮುಂದುವರಿದಿದೆ.

ಇವರಿಬ್ಬರ ನಡುವೆ ಇದ್ದ ಸಂಬಂಧದ ಸ್ವರೂಪವೇನು, ಈ ದಾರುಣ ನಿರ್ಧಾರಕ್ಕೆ ಕಾರಣವಾದ ಹಿನ್ನೆಲೆ ಏನು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಲಾಡ್ಜ್‌ನ ಸಿಸಿಟಿವಿ ದೃಶ್ಯಾವಳಿ, ಸಿಬ್ಬಂದಿ ಹಾಗೂ ಪರಿಚಿತರ ಹೇಳಿಕೆಗಳನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ. ಪ್ರಕರಣದ ನಿಖರ ಕಾರಣ ತಿಳಿಯಲು ತನಿಖೆ ಮುಂದುವರಿದಿದ್ದು, ಹೆಚ್ಚಿನ ಮಾಹಿತಿಗಾಗಿ ಪೊಲೀಸರು ಕಾಯುತ್ತಿದ್ದಾರೆ.

### ಪೊಲೀಸ್ ವೇಷದಲ್ಲಿ ದರೋಡೆ: ಗನ್ ತೋರಿಸಿ 20 ಲಕ್ಷ ನಗದು, ಅರ್ಧ ಕೆಜಿ ಚಿನ್ನ ಲೂಟಿ

ಯಲಹಂಕ ಪೊಲೀಸರು ಎಂದು ಹೇಳಿಕೊಂಡು ಮನೆಗೆ ನುಗ್ಗಿದ ಇಬ್ಬರು ಖದೀಮರು ದಂಪತಿಯನ್ನು ಕಟ್ಟಿಹಾಕಿ 20 ಲಕ್ಷ ರೂ. ನಗದು ಹಾಗೂ ಅರ್ಧ ಕೆಜಿ ಚಿನ್ನ ದೋಚಿ, ಮೊಬೈಲ್‌ಗಳು ಮತ್ತು ಸಿಸಿಟಿವಿ ಡಿವಿಆರ್ ಕಿತ್ತುಕೊಂಡು ಪರಾ–ರಿಯಾದರು. ಮಗುವಿನ ಮುಂದೆಯೇ ನಡೆದ ಈ ದರೋಡೆ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.

## ಮಾರ್ಚ್ 6ಕ್ಕೆ ಸಿದ್ದರಾಮಯ್ಯ 17ನೇ ಬಜೆಟ್ ಮಂಡನೆ


**ಬೆಂಗಳೂರು:** ಕರ್ನಾಟಕದಲ್ಲಿ ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿದ ಹೆಗ್ಗಳಿಕೆಗೆ ಪಾತ್ರರಾಗಿರುವ ಸಿದ್ದರಾಮಯ್ಯ ಅವರು ಬರುವ ಮಾರ್ಚ್ 6 ರಂದು ದಾಖಲೆಯ 17ನೇ ಬಜೆಟ್ ಮಂಡಿಸಲಿದ್ದಾರೆ. ರಾಜ್ಯದ ಆರ್ಥಿಕ ಪರಿಸ್ಥಿತಿ ಹಾಗೂ ಐದು ಗ್ಯಾರಂಟಿ ಯೋಜನೆಗಳ ಹಿನ್ನೆಲೆ ಈ ಬಜೆಟ್ ಸಾಕಷ್ಟು ಮಹತ್ವ ಪಡೆದಿದೆ. ಮಾರ್ಚ್ 6ರಿಂದ 27ರವರೆಗೆ ಅಧಿವೇಶನ ನಡೆಯಲಿದ್ದು, ಬೆಳಗ್ಗೆ 10:15ಕ್ಕೆ ಆಯವ್ಯಯ ಮಂಡನೆ ನಡೆಯಲಿದೆ. ಕೃಷಿ, ಶಿಕ್ಷಣ, ಆರೋಗ್ಯ, ಮೂಲಸೌಕರ್ಯಗಳಿಗೆ ಆದ್ಯತೆ ನೀಡುವ ಕುರಿತು ಈಗಾಗಲೇ ಇಲಾಖಾವಾರು ಸಭೆಗಳು ನಡೆದಿವೆ.

ಐದು ಗ್ಯಾರಂಟಿ ಯೋಜನೆಗಳಿಗೆ ಎಷ್ಟು ಅನುದಾನ ಮೀಸಲಾಗುತ್ತದೆ ಎಂಬುದು ಜನರ ಕುತೂಹಲದ ವಿಷಯವಾಗಿದೆ. ಜೊತೆಗೆ ಗ್ರಾಮೀಣಾಭಿವೃದ್ಧಿ ಹಾಗೂ 'ಬ್ರಾಂಡ್ ಬೆಂಗಳೂರು' ಯೋಜನೆಗೂ ವಿಶೇಷ ಒತ್ತು ಸಿಗುವ ಸಾಧ್ಯತೆ ಇದೆ. ಈ ಬಜೆಟ್ ಸರ್ಕಾರದ ಆರ್ಥಿಕ ಸಮತೋಲನ ಮತ್ತು ರಾಜಕೀಯ ದಿಕ್ಕನ್ನು ನಿರ್ಧರಿಸುವ ಪ್ರಮುಖ ಘಟ್ಟವಾಗಲಿದೆ. ರಾಜ್ಯದ ಸಾಲದ ನಿರ್ವಹಣೆ ಮತ್ತು ಆದಾಯ ವೃದ್ಧಿಗೆ ಕೈಗೊಳ್ಳಲಿರುವ ಕ್ರಮಗಳ ಮೇಲೂ ಆರ್ಥಿಕ ತಜ್ಞರ ಗಮನ ನೆಟ್ಟಿದೆ. ಬರುವ ದಿನಗಳಲ್ಲಿ ಈ ಬಜೆಟ್ ಸರ್ಕಾರದ ಆಡಳಿತ ಸಾಮರ್ಥ್ಯಕ್ಕೆ ಪ್ರಮುಖ ಪರೀಕ್ಷೆಯಾಗಲಿದೆ.



Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.

# ಸಾಂಸ್ಕೃತಿಕ ವೀರ ಕರೆ ಕಲ್ಲು ಚಿತ್ರಲಿಂಗೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಅದ್ದೂರಿ



**ತುಮಕೂರು:** ಗುಬ್ಬಿ ತಾಲೂಕಿನ ನೆಟ್ಟೆ ಕೆರೆ ಗೊಲ್ಲರಹಟ್ಟಿ ಗ್ರಾಮದಲ್ಲಿ ಕಾಡುಗೊಲ್ಲರ ಸಾಂಸ್ಕೃತಿಕ ವೈಭವವನ್ನು ಪ್ರತಿಬಿಂಬಿಸುವ ವೀರ ಕರೆ ಕಲ್ಲು ಚಿತ್ರಲಿಂಗೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಭಕ್ತಿ ಮತ್ತು ಸಂಭ್ರಮದ ವಾತಾವರಣದಲ್ಲಿ ಅದ್ದೂರಿಯಾಗಿ ನೆರವೇರಿಸಲಾಯಿತು. ಪ್ರತಿವರ್ಷ ಮಹಾಶಿವರಾತ್ರಿಯ ಪ್ರಯುಕ್ತ ಈ ಜಾತ್ರೆಯನ್ನು ಆಚರಿಸಲಾಗುತ್ತಿದ್ದು, ಗ್ರಾಮದೆಲ್ಲೆಡೆ ಹಬ್ಬದ ಸಂಭ್ರಮ ಮನೆಮಾಡಿತ್ತು. ಬೆಳಗ್ಗೆಯಿಂದಲೇ ಭಕ್ತರು ದೇವಾಲಯದಲ್ಲಿ ವಿಶೇಷ ಪೂಜೆಗಳನ್ನು ಸಲ್ಲಿಸಿ, ನಂತರ ದೇವರ ಮೆರವಣಿಗೆ ಭಕ್ತಿಭಾವದಿಂದ ಆರಂಭವಾಯಿತು. ಡೊಳ್ಳು-ನಾದಸ್ವರಗಳ ನಿನಾದದೊಂದಿಗೆ, ಭಕ್ತರ ಜಯಘೋಷಗಳ ನಡುವೆ ಮೆರವಣಿಗೆ ಬಸವನ ಗುಡ್ಡೆಗೆ ತಲುಪಿತು.

ಕಾಡುಗೊಲ್ಲರ ಸಂಪ್ರದಾಯದಂತೆ ಬಸವನ ಗುಡ್ಡೆಗೆ ಹಾಲು ಎರೆಯುವ ವಿಶಿಷ್ಟ ವಿಧಿ ನೆರವೇರಿಸಲಾಯಿತು. ಅನಾದಿಕಾಲದಿಂದ ಪ್ರಕೃತಿ ಆರಾಧನೆ ಮಾಡುತ್ತ ಬಂದಿರುವ ಕಾಡುಗೊಲ್ಲರು, ಪ್ರಕೃತಿಯ ಪ್ರತೀಕವಾಗಿ ಬಸವನ ಗುಡ್ಡೆಯನ್ನು ಪೂಜಿಸುತ್ತಾರೆ ಎಂಬ ನಂಬಿಕೆ ಇದೆ. ಈ ಸಂಪ್ರದಾಯವು ಅವರ ಸಂಸ್ಕೃತಿ ಮತ್ತು ಪರಂಪರೆಯ ಪ್ರತಿರೂಪವಾಗಿದ್ದು, ತಲೆಮಾರುಗಳಿಂದ ಸಂರಕ್ಷಿಸಿಕೊಂಡು ಬಂದಿದ್ದಾರೆ. ಬಸವನ ಗುಡ್ಡೆಯ ವಾತಾವರಣದಲ್ಲಿ ಭಕ್ತರ ದಂಡು ಸೇರಿ, ಪೂಜಾ ಕಾರ್ಯಗಳನ್ನು ಭಕ್ತಿಭಾವದಿಂದ ನೆರವೇರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪೂಜಾರಿ ಚಿತ್ತಯ್ಯ ಅವರು, ಕಾಡುಗೊಲ್ಲರು ಪ್ರಕೃತಿ ಆರಾಧಕರು; ಬಸವನ ಗುಡ್ಡೆಗೆ ಹಾಲು ಎರೆಯುವ ಕಾರ್ಯವು ಅವರ ಆಧ್ಯಾತ್ಮಿಕ ನಂಬಿಕೆಯ ಭಾಗವಾಗಿದೆ ಎಂದು ಹೇಳಿದರು. ಪೂಜಾರಿ ಮಹಾಲಿಂಗಯ್ಯ ಅವರು, ಕಾಡುಗೊಲ್ಲರ ಸಂಸ್ಕೃತಿ ಶ್ರೀಮಂತವಾಗಿದ್ದು, ಮೂಲ ಪರಂಪರೆಯನ್ನು ಉಳಿಸಿ ಬೆಳೆಸುವುದು ಎಲ್ಲರ ಕರ್ತವ್ಯ ಎಂದು ಅಭಿಪ್ರಾಯಪಟ್ಟರು. ಭಕ್ತಾದಿ ಶ್ರೀಧರ್ ಶಿಡ್ಲನಟ್ಟಿ ಅವರು, ತಳ ಸಮುದಾಯದ ಆರಾಧ್ಯ ದೈವವಾದ ಶ್ರೀ ಕರೆ ಕಲ್ಲು ಚಿತ್ರಲಿಂಗೇಶ್ವರ ಸ್ವಾಮಿ ಭಕ್ತರನ್ನು ಕಾಪಾಡುವ ಸತ್ಯ ದೈವವಾಗಿದ್ದು, ನಂಬಿಕೆಯೊಂದಿಗೆ ಬಂದವರಿಗೆ ಇಷ್ಟಾರ್ಥಗಳನ್ನು ಕರುಣಿಸುತ್ತಾನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಗ್ರಾಮದ ಹಾಗೂ ಕುಲದ ಗೌಡ ಪೂಜಾರಿಗಳು, ಗ್ರಾಮಸ್ಥರು, ಸಮುದಾಯದ ಮುಖಂಡರು ಮತ್ತು ಸುತ್ತಮುತ್ತಲಿನ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಜಾತ್ರಾ ಮಹೋತ್ಸವದಲ್ಲಿ ಸಹಸ್ರಾರು ಭಕ್ತಾದಿಗಳು ಪಾಲ್ಗೊಂಡು ಸ್ವಾಮಿಯ ದರ್ಶನ ಪಡೆದು ಅನುಗ್ರಹ ಪಡೆದರು. ಸಂಪೂರ್ಣ ಗ್ರಾಮದಲ್ಲಿ ಭಕ್ತಿ, ಸಂಸ್ಕೃತಿ ಮತ್ತು ಸಂಪ್ರದಾಯಗಳ ಸಂಭ್ರಮ ಮೆರೆದಿದ್ದು, ಜಾತ್ರೆ ಯಶಸ್ವಿಯಾಗಿ ನೆರವೇರಿತು.

# ಜೀವಂತ ರೈತನನ್ನ ದಾಖಲೆಗಳಲ್ಲಿ ಸಾಯಿಸಿದ ಅಧಿಕಾರಿಗಳು

**ನೆಲಮಂಗಲ:** ತಾಲ್ಲೂಕಿನ ಗೋವೇನಹಳ್ಳಿ ಗ್ರಾಮದ ಬಡ ರೈತ ಹನುಮಂತಯ್ಯ (ಬಿನ್ ಗಂಗಯ್ಯ) ಅವರನ್ನು ಜೀವಂತವಾಗಿದ್ದರೂ ಕಂದಾಯ ದಾಖಲೆಗಳಲ್ಲಿ ಮೃತಪಟ್ಟವರಂತೆ ದಾಖಲಿಸಿ ಆದೇಶ ಹೊರಡಿಸಿರುವ ಘಟನೆ ಬೆಳಕಿಗೆ ಬಂದಿದೆ. ಈ ವಿಚಾರ ಬೆಳಕಿಗೆ ಬಂದ ಬಳಿಕ ರೈತ ಮತ್ತು ಅವರ ಕುಟುಂಬಸ್ಥರು ಕಂದಾಯ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ ಪತ್ರಿಕಾಗೋಷ್ಠಿ ನಡೆಸಿದ್ದಾರೆ.

ಹನುಮಂತಯ್ಯ ಅವರ ತಂದೆ ಗಂಗಯ್ಯ ಅವರು 1959ರಲ್ಲಿ ಕೋಡಿಹಳ್ಳಿ ಗ್ರಾಮದ ಸರ್ವೆ ನಂ. 34/1ರಲ್ಲಿ 10 ಗುಂಟೆ ಕೃಷಿ ಜಮೀನನ್ನು ಕರಿಗೌಡರಿಂದ ಖರೀದಿಸಿದ್ದರು. ಆದರೆ ಖಾತೆ ಮಾಡಿಸಿಕೊಳ್ಳದೆ ಗಂಗಯ್ಯ ನಿಧನರಾದ ನಂತರ, ಅವರ ಮಗ ಹನುಮಂತಯ್ಯ ಖಾತೆ ಬದಲಾವಣೆಗಾಗಿ ದೊಡ್ಡಬಳ್ಳಾಪುರ ಉಪವಿಭಾಗಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ್ದರು. ಪ್ರಕರಣ ದಾಖಲಿಸಿಕೊಂಡ ಉಪವಿಭಾಗಾಧಿಕಾರಿ ಭೂ ಕಂದಾಯ ಕಾಯ್ದೆ ಕಲಂ 136/2ರಡಿ ವಿಚಾರಣೆ ನಡೆಸಿ, ಹನುಮಂತಯ್ಯ ಅವರಿಗೆ 10 ಗುಂಟೆ ಜಮೀನು ಖಾತೆ ಮಾಡಲು ಆದೇಶ ನೀಡಲಾಗಿತ್ತು.

ಆದರೆ 2021ರಲ್ಲಿ ಅದೇ ಸರ್ವೆ ನಂಬರ್‌ಗೆ ಸಂಬಂಧಿಸಿದಂತೆ ಮತ್ತೊಮ್ಮೆ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಲಾಗಿದೆ. ಈ ವೇಳೆ ಹನುಮಂತಯ್ಯ ನ್ಯಾಯಾಲಯಕ್ಕೆ ಹಾಜರಾಗಿ, "ಈ ಸರ್ವೆ ನಂಬರ್‌ನಲ್ಲಿ 10 ಗುಂಟೆ ಮಾತ್ರ ನನ್ನದು, ಉಳಿದ ಜಮೀನಿನಲ್ಲಿ ನನಗೆ ಹಕ್ಕಿಲ್ಲ" ಎಂದು ಪ್ರಮಾಣಪತ್ರ ಸಲ್ಲಿಸಿದ್ದಾಗಿ ತಿಳಿದುಬಂದಿದೆ.

ಇದಾದ ನಂತರ ಹೊರಬಂದ ಆದೇಶದಲ್ಲಿ ಹನುಮಂತಯ್ಯ ಮರಣ ಹೊಂದಿದ್ದಾರೆಂದು ಉಲ್ಲೇಖಿಸಲಾಗಿದ್ದು, ಅದನ್ನೇ ಆಧಾರ ಮಾಡಿಕೊಂಡು ನೆಲಮಂಗಲ ತಹಶೀಲ್ದಾರ್ ಆಗಿದ್ದ ಅಮೃತ ಅತ್ರೇಶ್ ಅವರು ಕೂಡ ಮೃತಪಟ್ಟ ವ್ಯಕ್ತಿಯಂತೆ ಪರಿಗಣಿಸಿ ಮುಂದಿನ ಆದೇಶ ಹೊರಡಿಸಿದ್ದಾಗಿ ಆರೋಪಿಸಲಾಗಿದೆ. ಈ ಬೆಳವಣಿಗೆ ರೈತ ಕುಟುಂಬವನ್ನು ಬೆಚ್ಚಿಬೀಳಿಸಿದೆ.

ಈ ಕುರಿತು ರೈತ ಹನುಮಂತಯ್ಯನ ಪುತ್ರ ಕಿರಣ್ ಮಾತನಾಡಿ, "ನನ್ನ ತಂದೆ ಜೀವಂತವಾಗಿದ್ದಾರೆ. ನ್ಯಾಯಾಲಯಕ್ಕೆ ಹಾಜರಾಗಿ ಪ್ರಮಾಣಪತ್ರ ಸಲ್ಲಿಸಿದ್ದಾರೆ. ಬದುಕಿರುವ ವ್ಯಕ್ತಿಯನ್ನು ಸತ್ತವನಂತೆ ಆದೇಶ ಮಾಡುವುದೇ ಹೇಗೆ ಸಾಧ್ಯ? ಇದು ನ್ಯಾಯ ವ್ಯವಸ್ಥೆಯ ಗಂಭೀರ ದೋಷ. ಲಂಚ ಕೊಟ್ಟರೆ ಏನೇ ಆದೇಶ ಮಾಡಿಕೊಡಲಾಗುತ್ತದೆಯೇ?" ಎಂದು ಪ್ರಶ್ನಿಸಿದರು. ಸರ್ಕಾರ ಮತ್ತು ಕಂದಾಯ ಸಚಿವರು ಈ ವಿಚಾರಕ್ಕೆ ಉತ್ತರಿಸಬೇಕು, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಅವರು ಒತ್ತಾಯಿಸಿದರು.

ರಾಷ್ಟ್ರೀಯ ಕಿಸಾನ್ ಸಂಘಟನೆಯ ರಾಷ್ಟ್ರೀಯ ಉಪಾಧ್ಯಕ್ಷ ಬೀಮಯ್ಯ ಕೂಡ ಪ್ರತಿಕ್ರಿಯಿಸಿ, 136/2 ಪ್ರಕರಣಗಳು ಪ್ರಭಾವಿಗಳಿಗೆ ಅನುಕೂಲವಾಗುತ್ತಿವೆ ಎಂಬ ಆರೋಪ ಮಾಡಿದರು. ದೊಡ್ಡಬಳ್ಳಾಪುರ ಕಂದಾಯ ನ್ಯಾಯಾಲಯದಲ್ಲಿ ರೈತರಿಗೆ ಅನುಕೂಲವಾಗದಂತೆ ವ್ಯತಿರಿಕ್ತ ಆದೇಶಗಳು ಹೊರಡುತ್ತಿವೆ ಎಂದು ಅವರು ಕಿಡಿಕಾರಿದರು. ಜೀವಂತ ರೈತನನ್ನೇ ದಾಖಲೆಗಳಲ್ಲಿ ಸಾಯಿಸಿದ ಈ ಆದೇಶ ಭ್ರಷ್ಟ ವ್ಯವಸ್ಥೆಯ ಉದಾಹರಣೆ ಎಂದು ಅವರು ಆರೋಪಿಸಿದರು.

ಒಟ್ಟಾರೆ, ರೈತರು ಮತ್ತು ಸಾಮಾನ್ಯ ಜನರಿಗೆ ನ್ಯಾಯ ದೊರಕಬೇಕಾದ ಸ್ಥಳವೇ ನ್ಯಾಯಾಲಯ. ಆದರೆ ಜೀವಂತ ವ್ಯಕ್ತಿಯನ್ನು ಸತ್ತವನಂತೆ ದಾಖಲಿಸಿ ಆದೇಶ ಹೊರಡಿಸಿದರೆ, ಕಂದಾಯ ವ್ಯವಸ್ಥೆಯ ವಿಶ್ವಾಸಾರ್ಹತೆ ಬಗ್ಗೆ ಗಂಭೀರ ಪ್ರಶ್ನೆಗಳು ಉದ್ಭವಿಸುತ್ತವೆ. ಈ ಪ್ರಕರಣಕ್ಕೆ ಸಂಬಂಧಿಸಿ ಸರ್ಕಾರ ಸ್ಪಷ್ಟನೆ ನೀಡಬೇಕು ಮತ್ತು ರೈತನಿಗೆ ನ್ಯಾಯ ಒದಗಿಸಬೇಕು ಎಂಬುದು ಕುಟುಂಬ ಹಾಗೂ ಸಂಘಟನೆಗಳ ಆಗ್ರಹವಾಗಿದೆ.

# 28 ವರ್ಷಗಳ ಬಳಿಕ ಸಿಕ್ಕಿಬಿದ್ದ ಟಿ.ವಿ ಕಳ್ಳ



**ದಾವಣಗೆರೆ:** ಕೇವಲ 2,000 ರೂ. ಮೌಲ್ಯದ ಟಿ.ವಿ ಕಳವು ಪ್ರಕರಣದಲ್ಲಿ 28 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ದಾವಣಗೆರೆ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತನನ್ನು ದೇವರಾಜ ಅರಸು ಬಡಾವಣೆಯ ಫಕೀರ (50) ಎಂದು ಗುರುತಿಸಲಾಗಿದೆ. 1998ರ ಸೆಪ್ಟೆಂಬರ್ 23ರಂದು ಗ್ರಾಮಾಂತರ ಠಾಣಾ ವ್ಯಾಪ್ತಿಯ ರಂಗನಾಥ ಬಡಾವಣೆಯ ರುದ್ರಯ್ಯ ಅವರ ಮನೆಯಲ್ಲಿ ಟಿ.ವಿ ಕಳವಾಗಿತ್ತು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ರವಿ ಮತ್ತು ಮುನಾವರ್ ಎಂಬವರನ್ನು ಬಂಧಿಸಿ ಕಳವಾದ ಟಿ.ವಿ ಜಪ್ತಿ ಮಾಡಿದ್ದರು. ಆದರೆ ಕೃತ್ಯದಲ್ಲಿ ಭಾಗಿಯಾಗಿದ್ದ ಫಕೀರ ಮತ್ತು ರಾಜ ಪರಾರಿಯಾಗಿದ್ದರು.

ತಲೆಮರೆಸಿಕೊಂಡ ಆರೋಪಿಗಳ ಪತ್ತೆಗೆ 2019ರವರೆಗೆ ಪೊಲೀಸರು ಪ್ರಯತ್ನ ನಡೆಸಿದ್ದರು. ಬಳಿಕ ಪ್ರಕರಣವನ್ನು ದೀರ್ಘಕಾಲ ಪತ್ತೆಯಾಗದ ಪ್ರಕರಣಗಳ ಪಟ್ಟಿಗೆ ಸೇರಿಸಲಾಗಿತ್ತು. ಇದೀಗ ವಿಶೇಷ ಕಾರ್ಯಾಚರಣೆ ಮೂಲಕ ಫಕೀರನನ್ನು ಬಂಧಿಸಲು ಪೊಲೀಸರು ಯಶಸ್ವಿಯಾಗಿದ್ದಾರೆ. ಬಂಧಿತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

# ನಾಯಕತ್ವ ಬದಲಾವಣೆ ವಿಚಾರ: ಸಿದ್ದರಾಮಯ್ಯ ಅಂಗಳಕ್ಕೆ ಚೆಂಡೆಸೆದ ಡಿಕೆಶಿ

**ಬೆಂಗಳೂರು:** ರಾಜ್ಯ ರಾಜಕಾರಣದಲ್ಲಿ ಮತ್ತೆ ನಾಯಕತ್ವ ಬದಲಾವಣೆ ಹಾಗೂ ಪವರ್ ಶೇರ್ ವಿಚಾರ ಚರ್ಚೆಗೆ ಗ್ರಾಸವಾಗಿರುವ ನಡುವೆಯೇ ಡಿಸಿಎಂ ಡಿ.ಕೆ. ಶಿವಕುಮಾರ್ ಹೊಸ ರಾಜಕೀಯ ತಂತ್ರ ಪ್ರಯೋಗಿಸಿದ್ದಾರೆ. "ಸಮಯ ಬಂದಾಗ ಸಿದ್ದರಾಮಯ್ಯ ಅವರೇ ಹೇಳುತ್ತಾರೆ" ಎಂದು ಹೇಳುವ ಮೂಲಕ ನಾಯಕತ್ವ ವಿಚಾರವನ್ನು ಸಿಎಂ ಸಿದ್ದರಾಮಯ್ಯ ಅವರ ಹೆಗಲಿಗೆ ಹಾಕಿದ್ದಾರೆ. ಈ ಹೇಳಿಕೆ ಕಾಂಗ್ರೆಸ್ ವಲಯದಲ್ಲಿ ಹೊಸ ರಾಜಕೀಯ ಚದುರಂಗದಾಟಕ್ಕೆ ಕಾರಣವಾಗಿದೆ.



ಸಚಿವ ಹೆಚ್.ಸಿ. ಮಹದೇವಪ್ಪ ನೀಡಿದ್ದ "ನಾಯಿ ಬಾಲ ಅಲ್ಲಾಡಿಸಬಾರದು" ಎಂಬ ಹೇಳಿಕೆಗೆ ನೇರ ಉತ್ತರ ನೀಡಲು ನಿರಾಕರಿಸಿದ ಡಿಕೆಶಿ, "ನಾನು ಯಾರಿಗೂ ಉತ್ತರ ಕೊಡಲು ತಯಾರಿಲ್ಲ. ನಾಯಕತ್ವ ವಿಚಾರದಲ್ಲಿ ನಾನು, ಸಿಎಂ ಮತ್ತು ಹೈಕಮಾಂಡ್ ನಡುವೆ ಚರ್ಚೆ ನಡೆದಿದೆ. ಮಲ್ಲಿಕಾರ್ಜುನ ಖರ್ಗೆ ಅವರು ಕೂಡ ಈ ಬಗ್ಗೆ ಹೇಳಿದ್ದಾರೆ. ನಾವು ಸೇರಿ ತೆಗೆದುಕೊಂಡಿರುವ ತೀರ್ಮಾನಕ್ಕೆ ಸಮಯ ಬಂದಾಗ ಉತ್ತರ ಸಿಗುತ್ತದೆ" ಎಂದು ಸ್ಪಷ್ಟಪಡಿಸಿದರು.

ಇದು ಯಾವುದೇ ಗುಪ್ತ ವ್ಯವಹಾರವಲ್ಲ ಎಂದು ಹೇಳಿದ ಅವರು, "ಇದರಲ್ಲಿ ಕದ್ದುಮುಚ್ಚಿ ಏನೂ ಇಲ್ಲ. ಸರ್ಕಾರ ಮತ್ತು ಪಕ್ಷದ ತೀರ್ಮಾನಕ್ಕೆ ಸರಿಯಾದ ಸಮಯದಲ್ಲಿ ಸ್ಪಷ್ಟನೆ ಸಿಗುತ್ತದೆ. ಸಿಎಂ ಸಿದ್ದರಾಮಯ್ಯ ಅವರೇ ರಾಜ್ಯದ ಜನತೆಗೆ ವಿವರಿಸುತ್ತಾರೆ" ಎಂದು ಹೇಳಿದರು. ಈ ಮೂಲಕ ಡಿಕೆಶಿ ನಾಯಕತ್ವ ಬದಲಾವಣೆಯ ಪ್ರಶ್ನೆಯನ್ನು ನೇರವಾಗಿ ಸಿಎಂ ಅಂಗಳಕ್ಕೆ ತಳ್ಳಿದಂತಾಗಿದೆ.

ಬೆಳಿಗ್ಗೆ ಶಾಸಕ ಬಸವರಾಜ ಶಿವಗಂಗಾ ಕೂಡ ಸಿಎಂ ಸ್ಪಷ್ಟಪಡಿಸಲಿ ಎಂದು ಹೇಳಿಕೆ ನೀಡಿದ್ದ ಹಿನ್ನೆಲೆ, ಮಧ್ಯಾಹ್ನ ಡಿಕೆಶಿಯ ಹೇಳಿಕೆ ರಾಜಕೀಯ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಡಿಕೆಶಿ ಉದ್ದೇಶಪೂರ್ವಕವಾಗಿ ವಿಷಯವನ್ನು ಸಿದ್ದರಾಮಯ್ಯ ಕಡೆ ತಳ್ಳಿದ್ದಾರೆಯೇ? ಅಥವಾ ಹೈಕಮಾಂಡ್ ಸೂಚನೆಯೇ ಇದಕ್ಕೆ ಹಿನ್ನೆಲೆಯೇ? ಎಂಬ ಪ್ರಶ್ನೆಗಳು ಎದ್ದಿವೆ.

ಇದೇ ವೇಳೆ ಕಾಂಗ್ರೆಸ್ ಶಾಸಕರ ವಿದೇಶ ಪ್ರವಾಸದ ವಿಚಾರದಲ್ಲೂ ಡಿಕೆಶಿ ಅಂತರ ಕಾಯ್ದುಕೊಂಡರು. "ಯಾವ ಟೂರ್ ಬಗ್ಗೆ ನನಗೆ ಮಾಹಿತಿ ಇಲ್ಲ. ಯಾರು ಕಳುಹಿಸುತ್ತಿದ್ದಾರೆ, ಯಾರು ಸ್ಪಾನ್ಸರ್ ಮಾಡುತ್ತಿದ್ದಾರೆ ಎಂಬುದೂ ಗೊತ್ತಿಲ್ಲ. ಇದು ಅವರವರ ವೈಯಕ್ತಿಕ ವಿಚಾರವಾಗಿರಬಹುದು. ನಾನು ಪಕ್ಷದ ಅಧ್ಯಕ್ಷನಾಗಿ ಮಧ್ಯಪ್ರವೇಶ ಮಾಡುವುದಿಲ್ಲ" ಎಂದು ಹೇಳಿದರು. ಈ ಹೇಳಿಕೆ ಕೂಡ ಪಕ್ಷದ ಒಳರಾಜಕೀಯದಲ್ಲಿ ಕುತೂಹಲ ಮೂಡಿಸಿದೆ.

ಒಟ್ಟಾರೆ, ನಾಯಕತ್ವ ಬದಲಾವಣೆ ಪ್ರಶ್ನೆಗೆ ಡಿಕೆಶಿ ನೀಡಿರುವ ಉತ್ತರ ಕಾಂಗ್ರೆಸ್ ಒಳರಾಜಕೀಯದಲ್ಲಿ ಹೊಸ ಚರ್ಚೆಗೆ ಕಾರಣವಾಗಿದೆ. ಸಿಎಂ ಸಿದ್ದರಾಮಯ್ಯ ಯಾವ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾರೆ? ಹೈಕಮಾಂಡ್ ಅಂತಿಮ ತೀರ್ಮಾನ ಯಾವಾಗ ಹೊರಬರುತ್ತದೆ? ಎಂಬುದಕ್ಕೆ ರಾಜಕೀಯ ವಲಯ ಕಾದು ನೋಡುತ್ತಿದೆ. ಕಾಲವೇ ಈ ಪ್ರಶ್ನೆಗಳಿಗೆ ಉತ್ತರ ನೀಡಬೇಕಿದೆ.

# ವಿಜೃಂಭಣೆಯ ಬೆಟ್ಟದ ಸೋಮೇಶ್ವರ ಜಾತ್ರಾ ಮಹೋತ್ಸವ



**ಯಶವಂತಪುರ:** ಕ್ಷೇತ್ರದ ತಾವರೆಕೆರೆ ಹೋಬಳಿ ಚಿಕ್ಕನಹಳ್ಳಿ ಗ್ರಾಮದ ಬೆಟ್ಟದ ಶ್ರೀ ಸೋಮೇಶ್ವರ ಜಾತ್ರಾ ಮಹೋತ್ಸವ ದೇವಸ್ಥಾನದ ಧರ್ಮದರ್ಶಿ ಜಯಕುಮಾರ್ ನೇತೃತ್ವದಲ್ಲಿ ಗ್ರಾಮಸ್ಥರ ಸಂಪೂರ್ಣ ಸಹಕಾರದೊಂದಿಗೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಶಿವರಾತ್ರಿ ಸಮಯದಲ್ಲಿ ನಡೆಯುವ ಜಾತ್ರಾ ಮಹೋತ್ಸವದ ಅಂಗವಾಗಿ ಬೆಟ್ಟದ ಮೇಲಿರುವ ಗ್ರಾಮದ ಆರಾಧ್ಯ ದೈವ ಶ್ರೀ ಸೋಮೇಶ್ವರನನ್ನು ವಿವಿಧ ಫಲಪುಷ್ಪಗಳಿಂದ ಸಿಂಗರಿಸಲಾಗಿತ್ತು. ದೇವಸ್ಥಾನವನ್ನು ತಳಿರು ತೋರಣ, ವಿದ್ಯುತ್ ದೀಪಗಳಿಂದ
ಅಲಂಕರಿಸಲಾಗಿತ್ತು. ಶ್ರೀ ಸೋಮೇಶ್ವರನಿಗೆ ವಿಶೇಷ ಅಭಿಷೇಕ, ಪೂಜೆ ಸಹಿತ ಹಲವು ಧಾರ್ಮಿಕ ಕೈಂಕರ್ಯಗಳನ್ನು ಶ್ರದ್ಧಾ ಭಕ್ತಿಯಿಂದ ನೆರವೇರಿಸಲಾಯಿತು ಸಹಸ್ರಾರು ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ಪುನೀತರಾದರು.

ದೇವಸ್ಥಾನದ ಪ್ರಾಂಗಣದಲ್ಲಿ ಸೋಮೇಶ್ವರನ ಉತ್ಸವ ಮೂರ್ತಿಯನ್ನ ವೀರಗಾಸೆ, ಡೊಳ್ಳು ಕುಣಿತ ಸಹಿತ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ಮಾಡಲಾಯಿತು ಭಕ್ತರು ಕುಣಿದು ಕುಪ್ಪಳಿಸಿದರು.ಪ್ರತಿ ವರ್ಷ ನಡೆಯುವ ಈ ಜಾತ್ರೆಯನ್ನು ಕಣ್ತುಂಬಿಕೊಳ್ಳಲು ಚಿಕ್ಕನಹಳ್ಳಿ, ಪಚ್ಚೆಪಾಳ್ಯದ ಗ್ರಾಮಸ್ಥರು ನಗರ ಪ್ರದೇಶಗಳಲ್ಲಿ ವಾಸಿಸುವ ಊರಿನವರು, ಹೆಣ್ಣುಮಕ್ಕಳು, ಬಂಧು ಬಳಗ ಹಾಗೂ ಅಕ್ಕಪಕ್ಕದ ಹಳ್ಳಿಗಳಾದ ಗೊಲ್ಲಹಳ್ಳಿ, ಸೂಲಿವಾರ, ಕುರುಬರಪಾಳ್ಯ, ದೊಡ್ಡೇರಿ ಬ್ಯಾಲಾಳು. ಚಂದ್ರಪ್ಪ ವೃತ್ತ, ಹುಲುವೇನಹಳ್ಳಿ ಗಣಪತಿಹಳ್ಳಿ ಕೋಲೂರು ತಾವರೆಕೆರೆ ಹೋಬಳಿ ಹಲವು ಗ್ರಾಮಗಳ

ಸಹಸ್ರಾರು ಭಕ್ತರು, ಗಣ್ಯರು ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ್ದರು. ತಾವರೆಕೆರೆ ಠಾಣೆ ಪೊಲೀಸರು ವಾಹನ ದಟ್ಟಣೆ ಹಾಗೂ ಜನಸಂದಣಿ ನಿಯಂತ್ರಿಸಿ ಜಾತ್ರೆ ಸುಸೂತ್ರವಾಗಿ ನಡೆಯಲು ಸಹಕರಿಸಿದರು. ಜಾತ್ರಾ ಆವರಣದಲ್ಲಿ ತಿಂಡಿ ತಿನಿಸು, ಮಕ್ಕಳ ಆಟಿಕೆಗಳು, ಹೆಣ್ಣು ಮಕ್ಕಳ ಅಲಂಕಾರಿಕ ಸಾಧನೆಗಳ ಭರ್ಜರಿ ವ್ಯಾಪಾರ ನಡೆಯಿತು. ಬಿಸಿಲಿನ ಝಳ ಹೆಚ್ಚಿದ್ದರಿಂದ ಐಸ್ ಕ್ರೀಮ್, ತಂಪುಪಾನೀಯಗಳಿಗೂ ಬೇಡಿಕೆ ಜೋರಾಗಿತ್ತು.ಜಾತ್ರೆಗೆ ಬಂದಿದ್ದ ಸುಮಾರು ನಾಲ್ಕೈದು ಸಾವಿರ ಭಕ್ತರಿಗೆ ಪ್ರಸಾದ ಹಾಗೂ ಅನ್ನಸಂತರ್ಪಣೆ ವ್ಯವಸ್ಥೆಯನ್ನು ಮಾಡಲಾಗಿತ್ತು.

ಈ ವೇಳೆ ಜಾತ್ರೆಯಲ್ಲಿ ಪಾಲ್ಗೊಂಡು ಮಾತನಾಡಿದ ಶಾಸಕ ಎಸ್.ಟಿ ಸೋಮಶೇಖರ್ ಸಮಾಜದಲ್ಲಿ ಸಂಬಂಧ ಗಟ್ಟಿಗೊಳಿಸಿ, ಸಾಮರಸ್ಯ, ಸಹಬಾಳ್ವೆಯನ್ನು ಪ್ರೋತ್ಸಾಹಿಸುವಲ್ಲಿ ಹಬ್ಬ ಹರಿದಿನಗಳು, ಜಾತ್ರೆ ಉತ್ಸವಗಳು ವಿಶೇಷ ಪಾತ್ರ ವಹಿಸುತ್ತಿವೆ. ಆಧುನಿಕತೆಯ ಜೀವನ ಶೈಲಿಯ ಜಂಜಾಟ, ಒತ್ತಡ ತಗ್ಗಿಸಲು ಜಾತ್ರೆಗಳು ಸಹಕಾರಿಯಾಗಿವೆ. ಒಟ್ಟಾರೆ ಗ್ರಾಮೀಣ ಸೊಗಡಿನ ಸಂಸ್ಕೃತಿ, ಪರಂಪರೆ, ಆಚಾರ ವಿಚಾರ ಉಳಿವಿಗೆ ಹಬ್ಬ, ಜಾತ್ರೆಗಳನ್ನು ಮುಂದುವರಿಸಿಕೊಂಡು ಹೋಗಬೇಕಾಗಿದೆ ಎಂದರು

# ಎಂಎಸ್‌ಜಿಪಿ ಕಸ ಘಟಕಕ್ಕೆ ಹೆಚ್ಚುವರಿ ಲಾರಿ: ತಡೆದ ಶಾಸಕ ಧೀರಜ್ ಮುನಿರಾಜ್



**ದೊಡ್ಡಬಳ್ಳಾಪುರ:** ತಾಲ್ಲೂಕಿನ ಎಂಎಸ್‌ಜಿಪಿ ಕಸ ಘಟಕಕ್ಕೆ ಜಿಬಿಎ ವತಿಯಿಂದ ಹೆಚ್ಚುವರಿ ಕಸದ ಲಾರಿಗಳನ್ನು ಕಳುಹಿಸುವ ಯತ್ನ ನಡೆದಿದೆ ಎಂಬ ಆರೋಪದ ಹಿನ್ನೆಲೆ ದೊಡ್ಡ ಮಂಕಲಾಳ ಬಳಿ ತೀವ್ರ ಪ್ರತಿಭಟನೆ ನಡೆಯಿತು. ಮಹದೇವಪುರದಲ್ಲಿರುವ ಕಸದ ಘಟಕದಲ್ಲಿ ಈಗಾಗಲೇ ನಡೆಯುತ್ತಿರುವ ವಿರೋಧದ ನಡುವೆಯೇ, ಮತ್ತಷ್ಟು ಸುಮಾರು 400 ಕಸದ ಗಾಡಿಗಳನ್ನು ಕಳುಹಿಸಲು ಯತ್ನಿಸಲಾಗಿದೆ ಎಂಬ ಮಾಹಿತಿ ಸ್ಥಳೀಯರನ್ನು ಕೆರಳಿಸಿದೆ.

ಈ ಹಿನ್ನೆಲೆ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡ ಮಂಕಲಾಳ ಬಳಿ ಸ್ಥಳೀಯರು ಹಾಗೂ ರೈತರು ಲಾರಿಗಳನ್ನು ತಡೆದು ಪ್ರತಿಭಟನೆ ನಡೆಸಿದರು. ಪ್ರತಿಭಟನೆಯಲ್ಲಿ ಶಾಸಕ ಧೀರಜ್ ಮುನಿರಾಜು ಕೂಡ ಭಾಗವಹಿಸಿ ಕಸದ ಗಾಡಿಗಳನ್ನು ತಡೆದು ವಾಪಸ್ಸು ಕಳುಹಿಸಲು ಮುಂದಾದರು. ಸ್ಥಳೀಯರೊಂದಿಗೆ ಸೇರಿ ಕಸ ಸಾಗಣೆ ವಿರೋಧಿಸಿ ರಸ್ತೆ ತಡೆ ನಡೆಸಿದ ಪರಿಣಾಮ ಸುಮಾರು ಅರವತ್ತಕ್ಕೂ ಹೆಚ್ಚು ಲಾರಿಗಳು ಅಲ್ಲಿ ನಿಲ್ಲಿಸಲ್ಪಟ್ಟವು.

ಇದೇ ವೇಳೆ ಫಿಟ್‌ನೆಸ್ ಸರ್ಟಿಫಿಕೇಟ್ ಇಲ್ಲದೆ ಸಂಚರಿಸುತ್ತಿದ್ದ ಲಾರಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಆರ್‌ಟಿಒ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ ಪರಿಶೀಲನೆ ನಡೆಸಲಾಯಿತು. ನಿಯಮ ಉಲ್ಲಂಘನೆ ಮಾಡಿದ ವಾಹನಗಳಿಗೆ ದಂಡ ವಿಧಿಸಲಾಗಿದೆ ಎಂದು ತಿಳಿದುಬಂದಿದೆ.

ಎಂಎಸ್‌ಜಿಪಿ ಕಸ ಘಟಕಕ್ಕೆ ಹೆಚ್ಚುವರಿ ಕಸದ ಭಾರ ಹಾಕುವುದರಿಂದ ಪರಿಸರ ಹಾಗೂ ಜನಾರೋಗ್ಯಕ್ಕೆ ಹಾನಿಯಾಗುತ್ತದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಈಗಾಗಲೇ ಕಸದ ಸಮಸ್ಯೆಯಿಂದ ಬಳಲುತ್ತಿರುವ ಪ್ರದೇಶಕ್ಕೆ ಮತ್ತಷ್ಟು ಗಾಡಿಗಳನ್ನು ಕಳುಹಿಸುವುದು ಸೂಕ್ತವಲ್ಲ ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಒಟ್ಟಾರೆ, ದೊಡ್ಡಬಳ್ಳಾಪುರ ತಾಲ್ಲೂಕಿನ ಕಸ ಘಟಕ ವಿಚಾರ ಮತ್ತೊಮ್ಮೆ ತೀವ್ರ ಚರ್ಚೆಗೆ ಗ್ರಾಸವಾಗಿದ್ದು, ಸರ್ಕಾರ ಈ ಕುರಿತು ಸ್ಪಷ್ಟನೆ ನೀಡಬೇಕು ಹಾಗೂ ಸ್ಥಳೀಯರ ಆತಂಕಗಳಿಗೆ ಪರಿಹಾರ ಕಲ್ಪಿಸಬೇಕು ಎಂಬ ಬೇಡಿಕೆ ಮುಂದಿರಿಸಲಾಗಿದೆ.

# ದಾರಿ ಬಿಡುವ ವಿಚಾರಕ್ಕೆ ಬಸ್: ಆಟೋ ಚಾಲಕರ ಮಧ್ಯೆ ಮಾರಾಮಾರಿ

**ಹುಬ್ಬಳ್ಳಿ:** ದಾರಿ ಬಿಡುವ ವಿಚಾರಕ್ಕೆ ಸಾರಿಗೆ ಬಸ್ ಹಾಗೂ ಆಟೋ ಚಾಲಕರ ನಡುವೆ ನಡು ರಸ್ತೆಯಲ್ಲೇ ಗಲಾಟೆ ನಡೆದು ಮಾರಾಮಾರಿಗೆ ತಿರುಗಿದ ಘಟನೆ ಹುಬ್ಬಳ್ಳಿ ಉಪನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ವೈ-ಚೆನ್ನಮ್ಮ ವೃತ್ತದ ನೂರಾಣಿ ರಸ್ತೆಯ ಆಶ್ರಯ ಲಾಡ್ಜ್ ಸಮೀಪ ಎದುರುಬದುರಾಗಿ ನಿಂತಿದ್ದ ಎರಡು ವಾಹನಗಳ ಚಾಲಕರ ನಡುವೆ ಮೊದಲಿಗೆ ಮಾತಿನ ಚಕಮಕಿ ಉಂಟಾಗಿದೆ. ನಂತರ ಅದು ಏಕಾಏಕಿ ಹೊಡೆದಾಟಕ್ಕೆ ತಿರುಗಿದೆ. ಕೆಎ63ಎಫ್ 0046 ಸಂಖ್ಯೆಯ ಸಾರಿಗೆ ಬಸ್ ಚಾಲಕನು ಆಟೋ ಚಾಲಕನಿಗೆ ಹಿಗ್ಗಾಮುಗ್ಗಾ ಥಳಿಸಿದರೆ, ಆಟೋ ಚಾಲಕನು ಕೂಡ ಪ್ರತಿಯಾಗಿ ಹಲ್ಲೆಗೆ ಮುಂದಾಗಿದ್ದಾನೆ.

ನಡು ರಸ್ತೆಯಲ್ಲೇ ನಡೆದ ಈ ಗಲಾಟೆಯನ್ನು ಅಲ್ಲಿದ್ದ ಸಾರ್ವಜನಿಕರು ತಮ್ಮ ಮೊಬೈಲ್‌ನಲ್ಲಿ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ. ಗಲಾಟೆ ತೀವ್ರವಾಗುತ್ತಿದ್ದಂತೆ ಸ್ಥಳೀಯರು ಮಧ್ಯಪ್ರವೇಶಿಸಿ ಇಬ್ಬರನ್ನು ಬೇರ್ಪಡಿಸಲು ಪ್ರಯತ್ನಿಸಿದರು. ಈ ವೇಳೆ ಕೆಲಕಾಲ ಸಂಚಾರ ಅಸ್ತವ್ಯಸ್ತಗೊಂಡು ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಯಿತು.

ಇಷ್ಟೆಲ್ಲ ಗಲಾಟೆ ನಡೆದರೂ ಸ್ಥಳಕ್ಕೆ ಸಂಚಾರಿ ಪೊಲೀಸರು ಆಗಮಿಸಿಲ್ಲ ಎಂಬ ಆರೋಪ ಸಾರ್ವಜನಿಕರಿಂದ ಕೇಳಿಬಂದಿದೆ. ಘಟನೆ ಕುರಿತು ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ.

RAJARATHA CYBER
All Online Services Under One Roof!
- Aadhaar, PAN Card, Voter ID, Ration Card
- e-Khata, Senior Citizen Card
- & Other Government Services
- Address: Junior College Road, Nelamangala
Contact: 9886926812 for medicts

# ರಾಗಿ ಖರೀದಿ ಕೇಂದ್ರ ಆರಂಭ: ರೈತರಿಗೆ ಮೊಬೈಲ್ ಟಾಯ್ಲೆಟ್ ವ್ಯವಸ್ಥೆ





**ಮೊಬೈಲ್ ಟಾಯ್ಲೆಟ್ ಸಿದ್ಧತೆ ಪರಿಶೀಲನೆ ನಡೆಸಿದ ನಗರಸಭೆ ಅಧ್ಯಕ್ಷ ಎನ್.ಗಣೇಶ್**

**ನೆಲಮಂಗಲ:** ತಾಲೂಕಿನ ಕೆಂಪಲಿಂಗನಹಳ್ಳಿ ಸಮೀಪ ರಾಗಿ ಖರೀದಿ ಕೇಂದ್ರ ಅಧಿಕೃತವಾಗಿ ಆರಂಭಗೊಂಡಿದ್ದು, ಮೊದಲ ದಿನದಿಂದಲೇ ರೈತರ ಸ್ಪಂದನೆ ವ್ಯಕ್ತವಾಗಿದೆ. ತಾಲೂಕಿನ ವಿವಿಧ ಗ್ರಾಮಗಳಿಂದ ಆಗಮಿಸುವ ರೈತರಿಗೆ ಯಾವುದೇ ತೊಂದರೆಯಾಗದಂತೆ ಸಮಗ್ರ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಮಾನ್ಯ ಶಾಸಕರಾದ ಎನ್. ಶ್ರೀನಿವಾಸ್ ಅವರ ಮುಂದಾಳತ್ವದಲ್ಲಿ ವಿಶೇಷ ವ್ಯವಸ್ಥೆಗಳು ಮಾಡಲಾಗಿದೆ.

ಕಳೆದ ನಾಲ್ಕು ವರ್ಷಗಳಿಂದಲೂ ರಾಗಿ ಖರೀದಿ ಕೇಂದ್ರದಲ್ಲಿ ರೈತರಿಗೆ ಉಚಿತ ಊಟ, ಶುದ್ಧ ಕುಡಿಯುವ ನೀರು, ಶಾಮಿಯಾನ ವ್ಯವಸ್ಥೆ ಹಾಗೂ ರಾತ್ರಿ ವೇಳೆಯ ಬೆಳಕಿನ ವ್ಯವಸ್ಥೆ ನಿರಂತರವಾಗಿ ಮಾಡಲಾಗುತ್ತಿತ್ತು. ರೈತರು ದೀರ್ಘಕಾಲ ಕಾಯಬೇಕಾಗುವ ಪರಿಸ್ಥಿತಿ ಎದುರಾಗುವುದರಿಂದ ಅವರಿಗೆ ವಿಶ್ರಾಂತಿ ಹಾಗೂ ಮೂಲಭೂತ ಸೌಲಭ್ಯಗಳ ಅಗತ್ಯತೆ ಮನಗಂಡು ಈ ವ್ಯವಸ್ಥೆಗಳನ್ನು ನಿರಂತರವಾಗಿ ಮುಂದುವರಿಸಲಾಗುತ್ತಿದೆ.

ಮೊದಲ ಬಾರಿಗೆ ಮೊಬೈಲ್ ಟಾಯ್ಲೆಟ್ (ಚರ ಶೌಚಾಲಯ) ವ್ಯವಸ್ಥೆಯನ್ನು ಆರಂಭಿಸಿರುವುದು ವಿಶೇಷವಾಗಿದ್ದು, ರೈತರಿಗೆ ಹೆಚ್ಚುವರಿ ಅನುಕೂಲ ಕಲ್ಪಿಸಲಾಗಿದೆ. ವಿಶೇಷವಾಗಿ ಮಹಿಳಾ ರೈತರು ಹಾಗೂ ವಯೋವೃದ್ಧರಿಗೆ ಈ ವ್ಯವಸ್ಥೆ ಸಹಾಯಕವಾಗಲಿದೆ. ಸ್ವಚ್ಛತೆ ಮತ್ತು ಆರೈಕೆಯನ್ನು ಗಮನದಲ್ಲಿಟ್ಟುಕೊಂಡು ಮೊಬೈಲ್ ಶೌಚಾಲಯ ವ್ಯವಸ್ಥೆ ಮಾಡಿರುವುದನ್ನು ರೈತರು ಸ್ವಾಗತಿಸಿದ್ದಾರೆ.

ರಾಗಿ ಮಾರಾಟಕ್ಕೆ ಬರುವ ತಾಲೂಕಿನ ಎಲ್ಲಾ ರೈತ ಬಾಂಧವರು ಸುಗಮವಾಗಿ ತಮ್ಮ ಉತ್ಪನ್ನವನ್ನು ಮಾರಾಟ ಮಾಡಲು ಅನುಕೂಲವಾಗುವಂತೆ ಸ್ಥಳದಲ್ಲಿ ಸರಿಯಾದ ವ್ಯವಸ್ಥೆ ಮಾಡಲಾಗಿದೆ. ವಾಹನ ನಿಲುಗಡೆ, ತೂಕ ಮಾಪನ ಹಾಗೂ ನೋಂದಣಿ ಪ್ರಕ್ರಿಯೆ ಸುಗಮವಾಗಿ ನಡೆಯುವಂತೆ ಕ್ರಮ ಕೈಗೊಳ್ಳಲಾಗಿದೆ.

ಈ ಎಲ್ಲಾ ಸೌಲಭ್ಯಗಳು ಈ ವರ್ಷದ ರಾಗಿ ಖರೀದಿ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ನಿರಂತರವಾಗಿ ಮುಂದುವರಿಯಲಿವೆ ಎಂದು ತಿಳಿಸಲಾಗಿದೆ. ರೈತರು ಯಾವುದೇ ತೊಂದರೆಯಿಲ್ಲದೆ, ಗೌರವಯುತ ವಾತಾವರಣದಲ್ಲಿ ತಮ್ಮ ಬೆಳೆ ಮಾರಾಟ ಮಾಡಲು ಸಾಧ್ಯವಾಗುತ್ತಿದೆ ಎಂಬುದು ರೈತ ಸಮುದಾಯದ ಅಭಿಪ್ರಾಯವಾಗಿದೆ.

# ಸಿದ್ದಗಂಗಾ ಶ್ರೀಗಳ ಗದ್ದುಗೆ ದರ್ಶನ ಪಡೆದ ಮಲ್ಲಣ್ಣ



ನೆಲಮಂಗಲ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷರು ಹಾಗೂ ಗೊಲ್ಲಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಎಸ್. ಮಲ್ಲಯ್ಯ ಅವರು ತುಮಕೂರಿನ ಪ್ರಸಿದ್ಧ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿ ಶ್ರೀಗಳ ಗದ್ದುಗೆ ದರ್ಶನ ಪಡೆದರು. ಧಾರ್ಮಿಕ ಭಕ್ತಿಭಾವದೊಂದಿಗೆ ಮಠಕ್ಕೆ ಆಗಮಿಸಿದ ಅವರು, ಶ್ರೀಗಳ ಸಮಾಧಿಗೆ ವಿಶೇಷ ಪೂಜೆ ಸಲ್ಲಿಸಿ, ನಂತರ ಮಠಾಧ್ಯಕ್ಷರಾದ ಸಿದ್ದಲಿಂಗ ಶ್ರೀಗಳ ಆಶೀರ್ವಾದ ಪಡೆದುಕೊಂಡರು.

ಸಿದ್ದಗಂಗಾ ಮಠವು ಶತಮಾನಗಳ ಇತಿಹಾಸ ಹೊಂದಿರುವ ಧಾರ್ಮಿಕ ಹಾಗೂ ಸಾಮಾಜಿಕ ಸೇವಾ ಕೇಂದ್ರವಾಗಿದ್ದು, ಲಕ್ಷಾಂತರ ಭಕ್ತರ ಭಕ್ತಿಭಾವದ ತಾಣವಾಗಿದೆ. ಈ ಪವಿತ್ರ ಕ್ಷೇತ್ರದಲ್ಲಿ ಶ್ರೀಗಳ ಗದ್ದುಗೆ ದರ್ಶನ ಮಾಡುವುದು ಜೀವನದಲ್ಲಿ ಶ್ರೇಯಸ್ಸು ತರುತ್ತದೆ ಎಂಬ ನಂಬಿಕೆ ಭಕ್ತರಲ್ಲಿ ಇದೆ. ಇದೇ ನಂಬಿಕೆಯಿಂದ ಮಲ್ಲಯ್ಯ ಅವರು ಮಠಕ್ಕೆ ಭೇಟಿ ನೀಡಿ ದರ್ಶನ ಪಡೆದುಕೊಂಡರು.

ಈ ಸಂದರ್ಭದಲ್ಲಿ ಅವರು ಸಮಾಜದ ಒಳಿತಿಗಾಗಿ ಹಾಗೂ ತಮ್ಮ ಸಾರ್ವಜನಿಕ ಜೀವನದಲ್ಲಿ ಇನ್ನಷ್ಟು ಸೇವೆ ಮಾಡಲು ಶಕ್ತಿ ದೊರಕಲಿ ಎಂದು ಪ್ರಾರ್ಥಿಸಿದರು. ಸಿದ್ದಗಂಗಾ ಶ್ರೀಗಳ ತತ್ವಗಳು ಮತ್ತು ಮಾನವೀಯ ಮೌಲ್ಯಗಳು ಸಮಾಜಕ್ಕೆ ದಾರಿದೀಪವಾಗಿವೆ ಎಂದು ಅವರು ಅಭಿಪ್ರಾಯಪಟ್ಟರು. ಶಿಕ್ಷಣ, ಸೇವೆ ಮತ್ತು ಧರ್ಮದ ಮಾರ್ಗದಲ್ಲಿ ಸಾಗಿದ ಶ್ರೀಗಳ ಆದರ್ಶಗಳನ್ನು ಎಲ್ಲರೂ ಅನುಸರಿಸಬೇಕು ಎಂದು ಹೇಳಿದರು.

ಮಠದ ಆವರಣದಲ್ಲಿ ಕೆಲಕಾಲ ತಂಗಿ, ಅಲ್ಲಿನ ಧಾರ್ಮಿಕ ವಿಧಿವಿಧಾನಗಳನ್ನು ವೀಕ್ಷಿಸಿದ ಮಲ್ಲಯ್ಯ ಅವರು, ಮಠದ ಸೇವಾ ಚಟುವಟಿಕೆಗಳನ್ನು ಮೆಚ್ಚುಗೆ ವ್ಯಕ್ತಪಡಿಸಿದರು. ಈ ವೇಳೆ ಅವರೊಂದಿಗೆ ಕೆಲ ಸ್ಥಳೀಯ ಮುಖಂಡರು ಮತ್ತು ಬೆಂಬಲಿಗರೂ ಉಪಸ್ಥಿತರಿದ್ದರು.



Printed by: R Ramesh, Published by Abhishek D R On Behalf of Abhishek D R, Printed at Maruthi Enterprises. No.1159, Near Floor Mill, D Cross, Doddaballapura Town, Bengaluru rural, Karnataka - 561203, Published at No. 3769/1, Rajarathna Nivasa, KSRTC Layout, Near Ambedkar Stadium, Rayan Nagara, Nelamangala. Editor Abhishek D R.